ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಕೊಲಂಬೊದಲ್ಲಿ ಇಂದು ನಡೆಯಲಿರುವ ಟಿ-20 ವಿಶ್ವಕಪ್ ಎ ಗುಂಪಿನ ಲೀಗ್ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನವನ್ನು ಎದುರಿಸಲಿದೆ.

15 ಫೆಬ್ರವರಿ 2026 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 332 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಶಿವರಾತ್ರಿ : ರುದ್ರವಿಲಾಸ ಮತ್ತು ಶಿವ ಕರುಣೆ » 2

ಜೀವ ನುಂಗಿದ ಗಾಳಿಪಟ ಹಾರಿಸುವ ಮಾಂಜಾ ದಾರ » 3

ದಿಡಗದಲ್ಲಿ ರಾಗಿ ಖರೀದಿ ಕೇಂದ್ರಕ್ಕೆ ಪ್ರಸ್ತಾವನೆ » 4

ಎಸ್‌ಸಿ-ಎಸ್‌ಟಿಗೆ ನಿವೇಶನ ನೀಡಲು ಒಪ್ಪಿಗೆ

ಸರ್ಕಾರದಿಂದ ಜಮೀನು ಖರೀದಿ ಪ್ರಯತ್ನ: ಸಚಿವ ಸತೀಶ್ ಜಾರಕಿಹೊಳಿ ಭರವಸೆ

• ಪ್ರಜೋದಯ ವರದಿ

ಹೊಳೆನರಸೀಪುರ: ಪರಿಶಿಷ್ಟ ಜಾತಿ, ಪಂಗಡದ ಜನರಿಗೆ ನಿವೇಶನ ಒದಗಿಸಲು ಜಮೀನು ಖರೀದಿಸಿ ಲೋಕೋಪಯೋಗಿ ಇಲಾಖೆ ಮೂಲಕ ವಿತರಿಸಲು ಸರ್ಕಾರ ಒಪ್ಪಿಗೆ ನೀಡಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ತಿಳಿಸಿದರು.

ಪಟ್ಟಣದಲ್ಲಿ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಸಂಘದಿಂದ ಶನಿವಾರ ಹಮ್ಮಿಕೊಂಡಿದ್ದ ನೌಕರರ ಸಮ್ಮಿಲನ ಸಮಾವೇಶ ಹಾಗು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿವೇಶನ ನಿರ್ಮಾಣಕ್ಕೆ ಮೀಸಲಿರುವ ಹಣವನ್ನು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಪ್ಪಿಗೆ ನೀಡಿದ್ದಾರೆ. ಹೀಗಾಗಿ ಆ ಕೆಲಸದ ಪ್ರಯತ್ನ ಮುಂದುವರೆದಿದೆ. ದೆಹಲಿಯಲ್ಲಿ 500 ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಹಾಸ್ಟೆಲ್ ನಿರ್ಮಾಣ ಪ್ರಕ್ರಿಯೆಯೂ ಆರಂಭವಾಗಿದೆ ಎಂದು ತಿಳಿಸಿದರು.

ಎಸ್‌ಸಿ-ಎಸ್‌ಟಿ ಸಮುದಾಯಕ್ಕೆ ಮೀಸಲಾದ ಅನುದಾನ ಸಂಪೂರ್ಣ ಪ್ರಮಾಣದಲ್ಲಿ ದೊರಕಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಸಂಘಟನೆಗಳ ಹೋರಾಟಗಳು ಸರಿಯಾದ ದಾರಿಯಲ್ಲಿರ ಬೇಕು. ನಮ್ಮ ಹಕ್ಕುಗಳನ್ನು ಪಡೆಯಲು ಜಾಣ್ಮೆ ಅಗತ್ಯ ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಅವರು ಮಾತನಾಡಿ, ನರೇಗಾ ಯೋಜನೆಯ ನಿಯಮಗಳನ್ನು ಬದಲಾಯಿಸುವ ಮೂಲಕ ಕೇಂದ್ರ ಸರ್ಕಾರ ಬಡಜನರ ಉದ್ಯೋಗಾವಕಾಶಗಳನ್ನು ಕಡಿತಗೊಳಿಸಿದೆ. ಎಸ್‌ಟಿ-ಎಸ್‌ಟಿ ಸಮುದಾಯದ ಸುಮಾರು 12 ಕೋಟಿ ಮಂದಿ ಉದ್ಯೋಗದ ಭರವಸೆಯಲ್ಲಿದ್ದು, 19 ಕೋಟಿ ಜನರು ಜೀವನ ನಿರ್ವಹಣೆಗೆ ಕೂಲಿ ಕೆಲಸಗಳನ್ನು ಅವಲಂಬಿಸಿದ್ದಾರೆ. ಇಂತಹ ಬಡ ಜನರ ಬದುಕಿನೊಂದಿಗೆ ಕೇಂದ್ರ ಸರ್ಕಾರ ಚೆಲ್ಲಾಟವಾಡುತ್ತಿದೆಂದು ಅಸಮಾಧಾನ ವ್ಯಕ್ತಪಡಿಸಿದರು.

> ದೇವೇಗೌಡರು ಮತ್ತು ಮಲ್ಲಿಕಾರ್ಜುನ ಖರ್ಗೆ ಅವರ ಶ್ರಮದಿಂದ ನಮ್ಮ ಸರ್ಕಾರ ಇದ್ದಾಗ 1 ಸಾವಿರ ಇಂಜಿನೀಯರ್‌ಗಳನ್ನು ಖಾಯಂ ಮಾಡಿದ್ದೇವೆ. ಅಂದಿನಿಂದಲೂ ದೇವೇಗೌಡರಿಗೆ ರಾಜಕೀಯ ಶಕ್ತಿ ತುಂಬಿದ ಪರಿಶಿಷ್ಟರ ಬೆಂಬಲವನ್ನು ನಾವೆಂದೂ ಮರೆಯುವುದಿಲ್ಲ.
> -ಹೆಚ್.ಡಿ.ರೇವಣ್ಣ, ಮಾಜಿ ಸಚಿವ

ಸಮಯೋಚಿತ ನಡವಳಿಕೆ ಅವಶ್ಯಕ

ಒಳಮೀಸಲಾತಿ ವಿಚಾರದಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ. ಜನಗಣತಿಯಲ್ಲಿ ನಿಖರ ಅಂಕಿ-ಅಂಶಗಳನ್ನು ನೀಡಬೇಕಾಗಿತ್ತು. ಆದರೆ ಕೆಲವರು ತಪ್ಪು ಆರೋಪಗಳನ್ನು ಮಾಡುತ್ತಿದ್ದಾರೆ. ಯಾವ ಪಕ್ಷದವರೇ ಆಗಿದ್ದರೂ ಸಮುದಾಯದ ನಾಯಕರು ಸಮಯೋಚಿತವಾಗಿ ನಡೆದು ಕೊಳ್ಳಬೇಕು. ಇಲ್ಲದಿದ್ದರೆ ರಾಜಕೀಯವಾಗಿ ಹಿನ್ನಡೆಯಾಗುವ ಸಾಧ್ಯತೆ ಇದೆ ಎಂದು ಸಚಿವ ಹೆಚ್.ಸಿ.ಮಹದೇವಪ್ಪ ಅವರು ಎಚ್ಚರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ರಾಜಕಾರಣಿಗಳು ಹಾಗು ನೌಕರರನ್ನು ಉದ್ದೇಶಿಸಿ, ನಿಮ್ಮನ್ನು ನಂಬಿ ಕೋಟ್ಯಾನುಕೋಟಿ ಅಸಹಾಯಕ ದಲಿತರಿಗೆ ಅನ್ಯಾಯ ಮಾಡಿದ್ದೇನೆ ಎನ್ನುವಂತಾಗಬಾರದು. ಸದನದಲ್ಲಿ ಅವರ ಸಮಸ್ಯೆಗಳನ್ನು ಚರ್ಚಿಸಿ ನ್ಯಾಯ ಒದಗಿಸಬೇಕು. ಅವರ ಆ ಮಾತಿನ ಅರ್ಥವನ್ನು ನಾವೆಲ್ಲರೂ ಅರಿತು ನಡೆಯಬೇಕು ಎಂದರು.

ಎಸ್‌ಸಿ-ಎಸ್‌ಟಿ ಸಮುದಾಯ ಘನತೆ ಮತ್ತು ಸ್ವಾಭಿಮಾನದ » ನಾಲ್ಕನೇ ಪುಟದಲ್ಲಿ

ತಿಂಗಳಾಂತ್ಯದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗ ಸ್ಥಾಪಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು ಫೆಬ್ರವರಿ ಕೊನೆಗೆ ಅನಾವರಣ ಮಾಡಲಾಗುತ್ತದೆಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಭರವಸೆ ನೀಡಿದರು.

ಹೊಳೆನರಸೀಪುರಕ್ಕೆ ತೆರಳುವ ಮಾರ್ಗ ಮಧ್ಯೆ ಶನಿವಾರ ಪಟ್ಟಣದ ಮಿನಿ ವಿಧಾನ ಸೌಧ ಎದುರು ನಿರ್ಮಿಸಿರುವ ಅಂಬೇಡ್ಕರ್ ಪ್ರತಿಮೆ ವೀಕ್ಷಿಸಿ ಮಾತನಾಡಿದ ಅವರು, ಪ್ರತಿಮೆ ಅನಾವರಣಕ್ಕೆ ಜ.26ರಂದು ಬರುವುದಾಗಿ ಹೇಳಿದ್ದೆ. ದಲಿತ ಮುಖಂಡರು ಮತ್ತು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಅವರು ಗಣರಾಜ್ಯೋತ್ಸವ ದಿನ ಬೇಡ. ಮತ್ತೊಂದು ದಿನ ಕಾರ್ಯಕ್ರಮ ಮಾಡೋಣವೆಂದು ಹೇಳಿದರು. ಆಗ ಜಿಲ್ಲಾಧಿಕಾರಿ ಅವರಿಗೆ ಕರೆ ಮಾಡಿ ಉದ್ಘಾಟನೆಯನ್ನು ಮುಂದೂಡುವಂತೆ ಸೂಚಿಸಿದ್ದೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗು ಕ್ಷೇತ್ರ ಶಾಸಕರ ಒಮ್ಮತದ ತೀರ್ಮಾನದಂತೆ ದಿನಾಂಕ ನಿಗದಿಪಡಿಸಲಾಗುತ್ತದೆ. ಏ.14ರ ಅಂಬೇಡ್ಕರ್ ಜಯಂತಿಯೊಳಗೆ ಪ್ರತಿಮೆ ಉದ್ಘಾಟನೆಯಾಗುತ್ತದೆಂದರು.

ಪ್ರತಿಮೆಗೆ ಮಾಲಾರ್ಪಣೆ ಮಾಡಲು ಸುತ್ತಲೂ ಗ್ರಿಲ್ ನಿರ್ಮಿಸಿರುವುದರಿಂದ ಅಂಬೇಡ್ಕರ್ ಅವರ ಮುಖದ ಭಾಗ ಸರಿಯಾಗಿ ಕಾಣುವುದಿಲ್ಲ. ಆದ್ದರಿಂದ ಒಂದು ಕಂಬಿಯನ್ನು ತೆರವು ಮಾಡುವಂತೆ ಅಧಿಕಾರಿಗಳಿಗೆ ಈ ವೇಳೆ ತಿಳಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ಮಂಜೇಗೌಡ, ಭೀಮ್ ಆರ್ಮಿ ಜಿಲ್ಲಾಧ್ಯಕ್ಷ ಪ್ರಸನ್ನ, ಮುಖಂಡರಾದ ನಾಗೇಶ್, ಧರ್ಮಯ್ಯ, ಪ್ರೇಮ್‌ಕುಮಾರ್, ಉಮಾಶಂಕರ್, ದೊರೆ, ಜಬೀವುಲ್ಲಾ ಬೇಗ್, ರವಿ, ಮಹೇಶ್ ಕಬ್ಬಾಳು, ತಹಶೀಲ್ದಾರ್ ಶಂಕರಪ್ಪ, ಸಮಾಜ ಕಲ್ಯಾಣಾಧಿಕಾರಿ ತ್ಯಾಗರಾಜ್ ಇತರರು ಇದ್ದರು.

ನಾಪತ್ತೆಯಾದ ಮಗನ ನೆನಪಲ್ಲೇ ಹಾಸಿಗೆ ಹಿಡಿದ ತಂದೆ

• ಪ್ರಜೋದಯ ವರದಿ

ಹಾಸನ: ಕುಟುಂಬದ ಆಧಾರ ಸ್ತಂಭವಾಗಿದ್ದ ಹದಿಹರೆಯದ ಮಗ ಏಕಾಏಕಿ ನಾಪತ್ತೆಯಾ ದ್ದರಿಂದ ಮಾನಸಿಕವಾಗಿ ತೀವ್ರ ಕುಗ್ಗಿದ ತಂದೆ ಸಾವು ಬದುಕಿನ ನಡುವೆ ಹೋರಾಡುತ್ತಿದ್ದು, ಉಸಿರು ನಿಲ್ಲುವ ಮೊದಲು ಒಂದು ಸಲ ನೋಡಬೇಕೆಂದು ಅಂಗಲಾಚುತ್ತಿದ್ದಾರೆ.

ದುದ್ದ ಹೋಬಳಿ ಜಕ್ಕೇನಹಳ್ಳಿ ಗ್ರಾಮದ ಜಗದೀಶ್ ಎಂಬುವವರ ಮಗ ದೀಪಕ್‌ನ ಬರುವಿಕೆಗಾಗಿ ಕಳೆದ ಎರಡು ತಿಂಗಳಿಂದ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಮಗನ ಚಿಂತೆಯಲ್ಲಿ ಹಾಸಿಗೆ ಹಿಡಿದಿರುವ ಅವರ ಆರೈಕೆಯನ್ನು ಇಳಿವಯಸ್ಸಿನ ತಾಯಿ ಸಣ್ಣಮ್ಮ ಮಾಡುತ್ತಿದ್ದಾರೆ. ತೀವ್ರ ಬಡತನ, ಅನಕ್ಷರಸ್ತರಾದ್ದರಿಂದ ಸಣ್ಣಮ್ಮ ಅವರಿಗೆ ದಿಕ್ಕು ತೋಚದಂತಾಗಿದೆ. ಮೊಮ್ಮಗ ಮನೆ ಬಿಟ್ಟು ಹೋದಾಗ ಹತ್ತಿರದ ಠಾಣೆಗೆ ತೆರಳಿ ನಾಪತ್ತೆ ಪ್ರಕರಣ ದಾಖಲಿಸಿಲ್ಲ, ಅವರಿಗೆ ಸಲಹೆ ನೀಡಲು ಹತ್ತಿರದ ಬಂಧುಗಳಿಲ್ಲ, ಹೀಗಾಗಿ ಮೊಮ್ಮಗನ ಬರುವಿಕೆಗೆ ಸಣ್ಣಮ್ಮ ಸಹ ಕಾಯುತ್ತಲೇ ಇದ್ದಾರೆ.

ಏಕಾಏಕಿ ಮನೆ ಬಿಟ್ಟ ದೀಪಕ್

ಎಂಟನೇ ತರಗತಿ ವರೆಗೆ ಓದಿರುವ ದೀಪಕ್ ಹಾಸನದ ಬಿ.ಕಾಟೀಹಳ್ಳಿಯ ಕೋಳಿ ಅಂಗಡಿ ಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ಆತನ ತಾಯಿ 20 ವರ್ಷಗಳ ಹಿಂದೆಯೇ ಹೆಣ್ಣು ಮಗುವಿನೊಂದಿಗೆ ಮನೆ ಬಿಟ್ಟು ಹೋಗಿದ್ದಾಳೆ. ದಶಕಗಳಿಂದಸಣ್ಣಮ್ಮ,ಜಗದೀಶ್ ಹಾಗು ದೀಪಕ್ ಮಾತ್ರ ಮನೆಯಲ್ಲಿದ್ದರು. ಕುಟುಂಬ ನಿರ್ವ ಹಣೆಗಾಗಿ ದೀಪಕ್ ಬಾಲ್ಯದಿಂದಲೂ ಹೋಟೆಲ್, ದಿನಸಿ ಅಂಗಡಿಗಳಲ್ಲಿ ಕೆಲಸ ಮಾಡಿಕೊಂಡಿದ್ದ. ಈಗ ಎರಡು ತಿಂಗಳಿಂದ ಮನೆ ಯಿಂದ ಹೋದ ವನು ವಾಪಾಸ್ ಬಂದಿಲ್ಲ. ಕೋಳಿ ಅಂಗಡಿಯವರು ಫೋನ್ ಮಾಡಿ ದ್ದಾರೆ, ತುರ್ತಾಗಿ ಹೋಗಬೇಕೆಂದು ಉಪಹಾರ ಸಹ ಮಾಡದೆ ಉಟ್ಟ ಬಟ್ಟೆ ಯಲ್ಲೇ ಹೋದವನು ಈ ವರೆಗೆ ಬಂದಿಲ್ಲ, ಆತನ ಬಳಿಯಿದ್ದ ಮೊಬೈಲ್ ಸ್ವಿಚ್‌ಆಫ್ ಆಗಿದೆ. ಕಾಟೀ ಹಳ್ಳಿಯ ಯಾವ ಅಂಗಡಿಯಲ್ಲಿ ಕೆಲಸ ಮಾಡುತ್ತಿ ದ್ದನೆಂಬುದು ಗೊತ್ತಿಲ್ಲ. ಯಾರಿಗಾದರೂ ದೀಪಕ್‌ನ ಸುಳಿವು ಸಿಕ್ಕರೆ ಊರಿಗೆ ಕಳುಹಿಸಿಕೊಡಿ, ಅವರ ಅಪ್ಪ ಜೀವ ಬಿಡುವುದರೊಳಗೆ ಭೇಟಿ ಯಾಗಲು ಸಹಕರಿಸಿ ಎಂದು ಸಣ್ಣಮ್ಮ ಅವರು ಅಂಗಲಾಚಿದ್ದಾರೆ. ಯುವಕನ ಸುಳಿವು ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆ ಅಥವಾ 99001 46973 ಇಲ್ಲಿಗೆ ಸಂಪರ್ಕಿಸಬಹುದು.

ಪ್ರೀತಮ್‌ಗೌಡಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿರುಗೇಟು

ವೈಯಕ್ತಿಕ ಹೇಳಿಕೆಗೆ ಉತ್ತರ ನೀಡುವುದು ಅನಾವಶ್ಯಕ

• ಪ್ರಜೋದಯ ವರದಿ

ಬೆಂಗಳೂರು: ವೈಯಕ್ತಿಕವಾಗಿ ಮಾತನಾಡುವವರಿಗೆ ನಾನು ಉತ್ತರ ನೀಡುವುದು ಅನಾವಶ್ಯಕ. ವ್ಯಕ್ತಿಗಳ ಹೇಳಿಕೆ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ ಎಂದು ಮಾಜಿ ಶಾಸಕ ಪ್ರೀತಮ್ ಗೌಡ, ನಾರಾಯಣಗೌಡ ಹೇಳಿಕೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿರುಗೇಟು ನೀಡಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದೊಂದು ಪಕ್ಷದಲ್ಲಿ ಒಂದೊಂದು ರೀತಿ ಚರ್ಚೆ ಮಾಡುತ್ತಾರೆ. ಕೆಲವರು ಅದರ ಬಗ್ಗೆ ಮಾತನಾಡುತ್ತಾರೆ. ಕೆಲವರು ಮಾತನಾಡುವುದೇ ಅಂತಿಮವಲ್ಲ, ವಿಧಾನಸಭೆ ಚುನಾವಣೆಗೆ ಎರಡು ವರ್ಷ, ಸ್ಥಳೀಯ ಸಂಸ್ಥೆ ಚುನಾವಣೆಗೆ 4-5 ತಿಂಗಳು ಇದೆ. ಆ ಸಮಯ ಬಂದಾಗ ಚರ್ಚೆ ಮಾಡೋಣ ಎಂದರು.

113 ಸ್ಥಾನ ಪಡೆದು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿ ಎಂಬ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ರಾಜ್ಯದಲ್ಲಿರುವ ಭ್ರಷ್ಟ, ಕೆಟ್ಟ ಸರ್ಕಾರವನ್ನು ತೆಗೆಯುವುದು ನನ್ನ ಅಜೆಂಡಾ. ಮುಖ್ಯಮಂತ್ರಿ ಆಗುವುದು ಆಮೇಲೆ ಅದು.

ಈ ರಾಜ್ಯದಲ್ಲಿ ಉತ್ತಮವಾದ ಸರ್ಕಾರ, ಜನಪರವಾದ ಸರ್ಕಾರ, ಜನತಾ ಸರ್ಕಾರ ಬರಬೇಕು ಅನ್ನೋದು ನನ್ನ ಅಭಿಪ್ರಾಯ ಎಂದರು.

ಜನರ ಭಾವನೆಗೆ ಸ್ಪಂದಿಸುವ ಸರ್ಕಾರ ಬೇಕು. ಇಂತಹ ಭ್ರಷ್ಟ ಸರ್ಕಾರ ತೆಗೆಯಬೇಕು. ಇಲ್ಲಿ ಮುಖ್ಯಮಂತ್ರಿ ಯಾರು ಆಗುತ್ತಾರೆ ಎನ್ನುವುದಲ್ಲ. ಕೂಸು ಹುಟ್ಟೋಕು ಮುನ್ನ ಕುಲಾವಿ ಹೊಲಸಿದರು ಎಂಬುದು ಏಕೆ ಬೇಕು. ಇನ್ನೂ ಎರಡು ವರ್ಷ ಇದೆ. ಬಹಳ ಶ್ರಮ ಹಾಕೋದಿದೆ. ಯಾರೋ ನಾಲ್ಕು ಜನ ಮಾತಾಡಿದ್ದಕ್ಕೆ ಉತ್ತರ ಕೊಟ್ಟರೆ ಅದಕ್ಕೆ ಪ್ರಬುದ್ಧತೆ ಇಲ್ಲ ಎನ್ನುತ್ತಾರೆ ಎಂದು ಹೇಳಿದರು.

ಮೈತ್ರಿ ವಿಷಯದ ಬಗ್ಗೆ ಈ ಕ್ಷಣದವರೆಗೆ ನಾವೇನು ಚರ್ಚೆ ಮಾಡಿಲ್ಲ. ಚರ್ಚೆ ಸಮಯ ಬಂದಾಗ ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಮೈತ್ರಿ ವಿಷಯದಲ್ಲಿ ನಾವು ಸಂಪೂರ್ಣವಾಗಿ ಮುಕ್ತವಾಗಿದ್ದೇವೆ. ಯಾವುದೇ ರೀತಿಯಲ್ಲಿ ನಮ್ಮಿಂದ ಜನರಲ್ಲಿ ಬೇರೆ ರೀತಿ ಗೊಂದಲಗಳಿಗೆ ಅವಕಾಶ ಕೊಡಬಾರದು ಎನ್ನುವುದು ನಮ್ಮ ನಿಲುವು. ಸಮಯ ಬಂದಾಗ ಈ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರು.

ಕಾಂಗ್ರೆಸ್ ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಶಾಸಕರು ರೆಸಾರ್ಟ್, ವಿದೇಶಿ ಪ್ರವಾಸ ಎಲ್ಲದರು ಹೋಗಲಿ. ನಮಗೆ ಬೇಕಾಗಿರೋದು ನಾಡಿನ ಜನರ ಸಮಸ್ಯೆಗೆ ಪರಿಹಾರ ಬೇಕು. ಅದರ ಕಡೆ ಗಮನ ಕೊಡಲಿ ಅನ್ನೋದು ನನ್ನ ಅಭಿಪ್ರಾಯ. ಕಾಂಗ್ರೆಸ್ ಶಾಸಕರು ವಿದೇಶದ ಅಭಿವೃದ್ಧಿ ಬಗ್ಗೆ ಅಧ್ಯಯನ ಮಾಡಲು ಹೋಗುತ್ತಿದ್ದೇವೆಂದು ಹೇಳಿದ್ದಾರೆ. ಅಧ್ಯಯನ ಮಾಡಲು ಹೋಗುವವರಿಗೆ ಬೇಡ ಎನ್ನಲು ಆಗುತ್ತಾ ಹೋಗಿ ಬರಲಿ ಅಂತ ಲೇವಡಿ ಮಾಡಿದರು.

1.6 ಲಕ್ಷ ಕೋಟಿ ರೂ. ವೆಚ್ಚದ ಯೋಜನೆಗೆ ಅನುಮೋದನೆ

• ಪ್ರಜೋದಯ ವರದಿ

ನವದೆಹಲಿ: ಮೂಲ ಸೌಕರ್ಯ, ನಗರಾಭಿವೃದ್ಧಿ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ 1.6 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸೌತ್ ಬ್ಲಾಕ್‌ನಲ್ಲಿ ನಡೆದ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ನಗರಗಳ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಉತ್ತೇಜನ ನೀಡಲು ಕೇಂದ್ರದ 1 ಲಕ್ಷ ಕೋಟಿ ರೂ. ನೆರವಿನಿಂದ ನಗರ ಸವಾಲು ನಿಧಿ (ಯುಸಿಎಫ್) ಆರಂಭಿಸಲು ಸಂಪುಟ ಅನುಮೋದನೆ ನೀಡಿದೆ. ನವೋದ್ಯಮಕ್ಕೆ ಉತ್ತೇಜನ ನೀಡಲು ಸ್ಟಾರ್ಟ್ ಅಪ್ ಇಂಡಿಯಾ ಫಂಡ್ ಆಫ್ ಫಂಡ್ಸ್ 2.0ಕ್ಕೆ ಒಪ್ಪಿಗೆ ಕೊಡಲಾಗಿದೆ. ಡೀಪ್ ಟೆಕ್, ತಂತ್ರಜ್ಞಾನ ಆಧಾರಿತ ನವೀನ ಉತ್ಪಾದನಾ ಸ್ಟಾರ್ಟ್ ಅಪ್‌ಗಳು ಮತ್ತು ಆರಂಭಿಕ ಬೆಳವಣಿಗೆಯ ಹಂತದ ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸಲು 10,000 ಕೋಟಿ ರೂ. ನಿಧಿ ಬಳಕೆ ಮಾಡಲಾಗುತ್ತದೆ.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

ಹಾಸನ: ಚನ್ನರಾಯಪಟ್ಟಣ ಹಾಗು ಶಾಂತಿಗ್ರಾಮ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಅಪರಿಚಿತ ವಾಹನ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಕಾರೆಕೆರೆ ಪೆಟ್ರೋಲ್ ಬಂಕ್ ಸಮೀಪ ನಡೆದಿದೆ. ದುದ್ದ ಹೋಬಳಿ ಹಾರನಹಳ್ಳಿ ಗ್ರಾಮದ ಮಂಜೇಗೌಡ (59) ಮೃತರು. ಫೆ.12ರ ರಾತ್ರಿ 10.30ರ ಸಮಯದಲ್ಲಿ ರಸ್ತೆಬದಿ ನಡೆದು ಕೊಂಡು ಹೋಗುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಯಾಗಿದೆ. ತಲೆ ಹಾಗು ಹೊಟ್ಟೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬೈಕ್ ಡಿಕ್ಕಿಯಾಗಿ ಮತ್ತೊಂದು ಬೈಕ್‌ನ ಸವಾರ ಮೃತಪಟ್ಟು ಮತ್ತೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಕೆ. ಕಾಳೇನ ಹಳ್ಳಿ ಗೇಟ್ ಸಮೀಪ ನಡೆದಿದೆ. ಹೊಳೆನರಸೀಪುರ ತಾಲ್ಲೂಕು ವಳಂಬಿಗೆ ಗ್ರಾಮದ ರಾಜೇಗೌಡ ಮೃತರು.

ರಾಜೇಗೌಡ ಮತ್ತು ಚಂದ್ರೇಗೌಡ ಅವರು ಸಂಬಂಧಿಕರ ತಿಥಿ ಕಾರ್ಯಕ್ಕಾಗಿ ಶ್ರವಣೇರಿಗೆ ಬಂದಿದ್ದರು. ಊಟ ಮುಗಿಸಿ ಊರಿಗೆ ವಾಪಾಸ್ಸಾಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕೆಟಿಎಂ ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ಗಂಭೀರ ಗಾಯಗೊಂಡಿದ್ದ ಇಬ್ಬರನ್ನು ಹಾಸನದ ಹಿಮ್ಸ್‌ಗೆ ದಾಖಲಿಸಲಾಗಿತ್ತು. ರಾಜೇಗೌಡ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಾಧ್ಯವಾಗಿಲ್ಲ. ಚನ್ನರಾಯಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಲ್ವಾಮಾ ದಾಳಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ

ಬೈಕ್ ರ‍್ಯಾಲಿ: ರಾಷ್ಟ್ರಧ್ವಜ ಹಿಡಿದು ಗಮನ ಸೆಳೆದ ನಿವೃತ್ತ ಅರೆಸೇನಾ ಪಡೆ

• ಪ್ರಜೋದಯ ವರದಿ

ಹಾಸನ: ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಸಿಆರ್‌ಪಿಎಫ್ 44 ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸುವ ಹಿನ್ನಲೆ ನಗರದಲ್ಲಿ ಅರೆಸೇನಾ ಪಡೆ ನಿವೃತ್ತ ಯೋಧರ ಒಕ್ಕೂಟದಿಂದ ಶನಿವಾರ ನಗರದಲ್ಲಿ ಬೈಕ್ ರ‍್ಯಾಲಿ ನಡೆಸಲಾಯಿತು.

ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ವಿ. ನಾಗೇಶ್ ಹಾಗು ಪದಾಧಿಕಾರಿಗಳ ನೇತೃತ್ವದಲ್ಲಿ ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಮುಂಭಾಗದಿಂದ ಆರಂಭವಾದ ಬೈಕ್ ರ‍್ಯಾಲಿಯಲ್ಲಿ ನಿವೃತ್ತ ಸೈನಿಕರ ಜೊತೆಗೆ ಅವರ ಕುಟುಂಬ ಸದಸ್ಯರು, ಮಕ್ಕಳೂ ಭಾಗಿಯಾಗಿ ಅಗಲಿದ ಯೋಧರಿಗೆ ಭಾವ

ಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಕೆಲವರು ಸೇನಾ ಸಮವಸ್ತ್ರ ಧರಿಸಿ, ರಾಷ್ಟ್ರಧ್ವಜ ಹಿಡಿದು ಗಮನ ಸೆಳೆದರು.

ಡೈರಿ ವೃತ್ತದ ಬಳಿಯಿಂದ ಹೊರಟ ರ‍್ಯಾಲಿಯು ರಿಂಗ್ ರಸ್ತೆ, ಸುಬೇದಾರ್ ನಾಗೇಶ್ ವೃತ್ತ, ಸಾಲಗಾಮೆ ರಸ್ತೆ, ಸಹ್ಯಾದ್ರಿ ಸರ್ಕಲ್, ಹೇಮಾವತಿ ಪ್ರತಿಮೆ, ಎನ್. ಆರ್.ವೃತ್ತ, ಬಿ.ಎಂ.ರಸ್ತೆ, ರೈಲ್ವೆ ನಿಲ್ದಾಣ ಮುಂಭಾಗ, ಡೈರಿ ವೃತ್ತದ ಮೂಲಕ ಕೆಂಚಟ್ಟಹಳ್ಳಿಯಲ್ಲಿರುವ ಅರೆಸೇನಾ ಪಡೆಯ ಭವನದ ಬಳಿಗೆ ತೆರಳಿ ಕೊನೆಗೊಂಡಿತು.

ಈ ವೇಳೆ ಮಾತನಾಡಿದ ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ವಿ.ನಾಗೇಶ್ ಅವರು, ಸಿಆರ್‌ಪಿಎಫ್‌ನ 44 ಮಂದಿ ಯೋಧರು ಹುತಾತ್ಮರಾಗಿ ಇಂದಿಗೆ 7 ವರ್ಷ ತುಂಬಿದೆ. ಹಾಗೆಯೇ ರಾಜ್ಯದಲ್ಲೇ ಮೊದಲ ಬಾರಿಗೆ ಹಾಸನದಲ್ಲಿ ಅರೆಸೇನಾ ಭವನ ನಿರ್ಮಾಣಗೊಂಡು 1 ವರ್ಷ ಕಳೆದಿದೆ. ಅದರ ಸ್ಮರಣಾರ್ಥ » ನಾಲ್ಕನೇ ಪುಟದಲ್ಲಿ

ಡ್ರಗ್ಸ್ ಸಾಗಿಸುತ್ತಿದ್ದ ಐವರು ಆರೋಪಿಗಳ ಬಂಧನ

• ಪ್ರಜೋದಯ ವರದಿ

ಹಾಸನ: ನಗರದಲ್ಲಿ ಎಂಡಿಎಂಎ ಮಾದಕ ವಸ್ತು ಮಾರಾಟ ಜಾಲವನ್ನು ಪೊಲೀಸರು ಭೇದಿಸಿ, ಐವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಾರಿನಲ್ಲಿ 40 ಗ್ರಾಂ ಎಂಡಿಎಂಎ ಪತ್ತೆಯಾಗಿದ್ದು, ಅದರ ಮೌಲ್ಯ 2 ಲಕ್ಷಕ್ಕೂ ಅಧಿಕವೆಂದು ಅಂದಾಜಿಸಲಾಗಿದೆ.

ಖಚಿತ ಮಾಹಿತಿ ಮೇರೆಗೆ ನಗರ ರಾಜ್‌ಕುಮಾರ್ ನಗರ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಸಂಚರಿ ಸುತ್ತಿದ್ದ ಎರ್ಟಿಗಾ ಕಾರನ್ನು ತಪಾಸಣೆ ನಡೆಸಿದ ವೇಳೆ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. ಬಂಧಿತ ರನ್ನು ಶಿವಮೊಗ್ಗಾ ಮೂಲದ ಫರ್ವಿಜ್ (29), ಸುಹೇಲ್ (24), ಅಬ್ದುಲ್ ಯಾಸಿನ್ (20), ಇಬ್ರತ್ ಖಾನ್ (24) ಹಾಗು ಹಾಸನದ ಸೈಯದ್ ಯೂಸಫ್ (23) ಎಂದು ಗುರುತಿಸಲಾಗಿದೆ. ನಾಲ್ವರು ಶಿವಮೊಗ್ಗಾ ಜಿಲ್ಲೆಯವ

ರಾಗಿದ್ದು, ಒಬ್ಬ ಹಾಸನ ನಿವಾಸಿ ಎಂದು ಪೊಲೀಸರು ತಿಳಿಸಿದ್ದಾರೆ. 40 ಗ್ರಾಂ ಎಂಡಿಎಂಎ ಹಾಗು ಆರೋಪಿಗಳು ಬಳಸುತ್ತಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ.

ಸಿಪಿಐ ಸ್ವಾಮಿನಾಥ್ ನೇತೃತ್ವದಲ್ಲಿ ಪಿಎಸ್‌ಐ ರವಿಶಂಕರ್, ಸಿಬ್ಬಂದಿ ಪ್ರಸನ್ನ ಕುಮಾರ್,ದಿಲೀಪ್,ಪುನೀತ್, ಲೋಕೇಶ್, ಹನುಮೇಶ್ ಇತರರು ಕಾರ್ಯಾಚರಣೆ ನಡೆಸಿದ್ದರು. ಈಸಂಬಂಧ ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆಯಲ್ಲಿಟ್ಟಿದ್ದ ಮಾಂಗಲ್ಯ ಸರ ಕಳವು

ಹಾಸನ: ಕಾರ್ಯನಿಮಿತ್ತ ಅಣ್ಣನ ಮನೆಗೆ ಬಂದಿದ್ದ ತಂಗಿಯ ಚಿನ್ನದ ಮಾಂಗಲ್ಯ ಸರ ನಾಪತ್ತೆಯಾಗಿರುವ ಘಟನೆ ನಗರದಲ್ಲಿ ನಡೆದಿದೆ.

ಬೆಂಗಳೂರಿನ ಬಿಟಿಎಂ ನಿವಾಸಿ ಸರಸ್ವತಿ ಎಂಬುವವರ 5.40 ಲಕ್ಷ ರೂ. ಮೌಲ್ಯದ ಸರ ಕಳುವಾಗಿದೆ. ಫೆ.8ರ ಭಾನುವಾರ ನಗರದಲ್ಲಿ ವಾಸವಿರುವ ಸಹೋದರ ವೆಂಕಟೇಶ್ ಮನೆಗೆ ಬಂದಿದ್ದ ಅವರು ರಾತ್ರಿ ಮಲಗುವಾಗ ಮಾಂಗಲ್ಯ ಸರವನ್ನು ಬಿಚ್ಚಿಟ್ಟಿದ್ದರು. ಮಧ್ಯರಾತ್ರಿ 1 ಗಂಟೆಗೆ ಎದ್ದು ಕೆಎಸ್‌ಆರ್‌ಟಿಸಿ ಬಸ್ ಮೂಲಕ ಬೆಂಗಳೂರಿಗೆ ತೆರಳಿದ್ದಾರೆ. ಬೆಳಿಗ್ಗೆ 6 ಗಂಟೆಗೆ ಮನೆ ತಲುಪಿದ ಅವರು 9 ಗಂಟೆಗೆ ನೋಡಿಕೊಂಡಾಗ ಚಿನ್ನದ ಸರವನ್ನು ಹಾಸನದಲ್ಲೇ ಬಿಟ್ಟು ಬಂದಿರುವುದನ್ನು ನೆನಪಿಸಿ ಕೊಂಡಿದ್ದಾರೆ. ತಕ್ಷಣ ಅಣ್ಣನ ಹೆಂಡತಿ ಶೋಭಾ ಅವರಿಗೆ ಕರೆ ಮಾಡಿ ಮಾಂಗಲ್ಯ ಸರವನ್ನು ಬಿಚ್ಚಿಟ್ಟಿದ್ದ ಜಾಗ ಹೇಳಿ ಅದನ್ನು ಎತ್ತಿ ಇಡಿ ಎಂದು ಹೇಳಿ ದಾಗ ಶೋಭಾ ಅವರು, ಸರ ಎಲ್ಲೂ ಇಲ್ಲ ಎಂದು ಹೇಳಿದ್ದಾರೆ. ಅಣ್ಣನ ಮನೆಯವರೇ ಸರ ಕದ್ದಿದ್ದು ವೆಂಕಟೇಶ್ ಪತ್ನಿ ಶೋಭಾ, ಅವರ ಮಗ ಲೋಹಿತ್, ಮಗಳು ಸ್ವಾತಿ ಅವರ ಮೇಲೆ ಅನುಮಾನ ವಿದೆ ಎಂದು ಸರಸ್ವತಿ ಆರೋಪಿಸಿದ್ದಾರೆ.

ಫೆ.18 ರಂದು ನಶಾ ಮುಕ್ತ ಕರ್ನಾಟಕ ಅಭಿಯಾನ

• ಪ್ರಜೋದಯ ವರದಿ

ಹಾಸನ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅನುಮೋದಿತ ಆರೋಗ್ಯ ವಿಜ್ಞಾನಗಳ ಸಮೂಹ ಸಂಸ್ಥೆಗಳಿಂದ ಫೆ.18ರಂದು ನಗರದಲ್ಲಿ ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್ ಹಾಗು ಅಂಗಾಂಗ ದಾನ-ಅಭಿಯಾನ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ರಾಜೀವ್ ಆಯುರ್ವೇದ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ॥ ಎಸ್.ಎ.ನಿತಿನ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ರಾಜೀವ್ ಗಾಂಧಿ ಆರೋಗ್ಯ ವಿವಿ ವ್ಯಾಪ್ತಿಗೆ ಸೇರಿದ 21 ಶಿಕ್ಷಣ ಸಂಸ್ಥೆಗಳು ಜಿಲ್ಲೆಯಲ್ಲಿದ್ದು ಅಭಿಯಾನದಲ್ಲಿ 4 ಸಾವಿರ ಮಕ್ಕಳು ಭಾಗವಹಿಸಲಿದ್ದಾರೆ. ಅಂದು ಬೆಳಿಗ್ಗೆ 7 ಗಂಟೆಗೆ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ವೇದಿಕೆ ಕಾರ್ಯಕ್ರಮ ಮುಗಿದ ಬಳಿಕ ಕ್ರೀಡಾಂಗಣದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ವಾಕಥಾನ್ ನಡೆಯಲಿದೆಯೆಂದರು.

ರಾಜೀವ್‌ಗಾಂಧಿ ಆರೋಗ್ಯ ವಿವಿ ಉಪ ಕುಲಪತಿ ಡಾ.ಬಿ.ಸಿ.ಭಗವಾನ್



ದಿಕ್ಸೂಚಿ ಭಾಷಣ ಜೊತೆಗೆ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹಾಗು ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಸೇರಿ ಎಲ್ಲಾ ಅಧಿಕಾರಿಗಳು ಭಾಗಿಯಾಗಲಿದ್ದಾರೆ. ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಮಾದಕ ವಸ್ತು ಸೇವನೆಯಿಂದ ಆಗುತ್ತಿರುವ ಕೌಟುಂಬಿಕ, ಸಾಮಾಜಿಕ, ಸಾಂಸಾರಿಕ ತೊಂದರೆ ತಪ್ಪಿಸುವುದು ಇದರ ಉದ್ದೇಶ. ವಾಕಥಾನ್‌ನಲ್ಲಿ ಅರಿವು ಮೂಡಿಸುವ, ಎಲ್ಲರನ್ನೂ ಎಚ್ಚರಿಸುವ ಭಿತ್ತಿಪತ್ರ, ಬೀದಿ ನಾಟಕ, ಟ್ಯಾಬ್ಲೋ ಪ್ರದರ್ಶನ ಇರಲಿದೆ. ಎನ್. ಆರ್.ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಜಿಲ್ಲಾಧಿಕಾರಿ ಕಚೇರಿ ತಲುಪಲಾಗುವುದು. ಅಂಗಾಂಗ ದಾನದ ಕುರಿತು ಅರಿವು ಮೂಡಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ॥ ರಾಮನಾಥ್, ಡಾ॥ ಶಶಿಕುಮಾರ್, ಡಾ॥ ಕಿರಣ್ ಕೆಂಪೇಗೌಡ ಇದ್ದರು.

ಆಭರಣಕ್ಕಾಗಿ ಕೊಲೆ ಶಂಕೆ, ಕೆರೆಯಲ್ಲಿ ಶೋಧ | ಬಟ್ಟೆ, ಚಪ್ಪಲಿ, ವ್ಯಾನಿಟಿ ಬ್ಯಾಗ್ ಪತ್ತೆ

ಮದುವೆಗೆ ಬಂದಿದ್ದ ಮಹಿಳೆ ನಿಗೂಢ ಕಣ್ಮರೆ

• ಪ್ರಜೋದಯ ವರದಿ

ಹಾಸನ: ಮದುವೆಗೆ ಬಂದಿದ್ದ ಮಹಿಳೆ ನಿಗೂಢವಾಗಿ ಕಣ್ಮರೆಯಾಗಿ, ನಾಪತ್ತೆಯಾದ ಸ್ಥಳದಲ್ಲಿ ಬಟ್ಟೆ, ಚಪ್ಪಲಿ, ವ್ಯಾನಿಟಿ ಬ್ಯಾಗ್ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಯಲಿಯೂರು ಗ್ರಾಮದಿಂದ ಗುರುವಾರ ಮದುವೆಗೆ ಬಂದಿದ್ದ ಪ್ರಿಯಾಂಕ (29) ಬೇಲೂರು ತಾಲ್ಲೂಕಿನ ಮತ್ತಾವರ ಗ್ರಾಮದಿಂದ ನಿಗೂಢವಾಗಿ ಕಣ್ಮರೆಯಾಗಿದ್ದಾರೆ. ಮಹಿಳೆಯ ಒಳ ಉಡುಪು, ಚಪ್ಪಲಿ ಹಾಗು ವ್ಯಾನಿಟಿ ಬ್ಯಾಗ್ ಹಾಸನ ತಾಲ್ಲೂಕಿನ ಕಲ್ಕೆರೆ ಗ್ರಾಮದ ಬಳಿ ಪತ್ತೆಯಾಗಿದ್ದು, ಕೊಲೆ ಮಾಡಿ ಸಮೀಪದ ಲ್ಲಿರುವ ಕೆರೆಗೆ ಶವ ಎಸೆದಿರುವ ಅನುಮಾನದ ಮೇರೆಗೆ ಶೋಧ ಕಾರ್ಯಾಚರಣೆ ಮುಂದುವರಿ ದಿದೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಸೋಕೋ ತಂಡ, ಡಾಗ್ ಸ್ಕ್ವಾಡ್ ಆಗಮಿಸಿ ಪರಿಶೀಲನೆ ನಡೆಸಿದೆ.

ಬೇಲೂರು ತಾಲ್ಲೂಕಿನ ಮತ್ತಾವರ ಗ್ರಾಮ

ಅಪಾರ ಚಿನ್ನಾಭರಣ ಧರಿಸಿದ್ದ ಮಹಿಳೆ

ಪ್ರಿಯಾಂಕ ಮೈಮೇಲೆ ಒಂದು ನೆಕ್ಲೆಸ್, ಎರಡು ಎಳೆ ಸರ, ಕಿವಿ ಓಲೆ, ಉಂಗುರ ಸೇರಿ 20 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣವನ್ನು ಹಾಕಿದ್ದರು. ಚಿನ್ನಾಭರಣದ ಆಸೆಗೆ ಕೊಲೆ ಮಾಡಿ ಕೆರೆಗೆ ಬಿಸಾಡಿರಬಹುದೆಂದು ಕುಟುಂಬಸ್ಥರು ಶಂಕಿಸಿದ್ದಾರೆ. ಶ್ವಾನದಳ, ಸೋಕೋ ತಂಡ ಮಾತ್ರವಲ್ಲದೇ ಡ್ರೋನ್ ಮೂಲಕ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಶೋಧ ಕಾರ್ಯ ನಡೆಯಿತು.

> ಪ್ರಿಯಾಂಕ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಬಟ್ಟೆ, ವಸ್ತುಗಳು ಸಿಕ್ಕಿವೆ. ಪತ್ತೆ ಹಚ್ಚಲು ತಾಂತ್ರಿಕ ವಿವರಗಳನ್ನು ಕಲೆಹಾಕಿ ಶೋಧ ನಡೆಸಲಾಗುತ್ತಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ಅಲೆದಾಡಿಸಿದ್ದಾರೆಂಬ ದೂರಿಗೆ ಸಂಬಂಧಿಸಿದಂತೆ ಲೋಪವಾಗಿದ್ದರೆ ಕ್ರಮ ಕೈಗೊಳ್ಳಲಾಗುವುದು.
> -ಶುಭನ್ವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಪ್ರಿಯಾಂಕ ಅವರನ್ನು ಕಳೆದ ಹತ್ತು ವರ್ಷಗಳ ಹಿಂದೆ, ಕುಣಿಗಲ್ ತಾಲ್ಲೂಕಿನ ಯಲಿಯೂರು ಗ್ರಾಮದ ರುದ್ರೇಶ್ ಅವರೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ದಂಪತಿಗೆ ಒಬ್ಬ ಗಂಡು ಮಗನಿದ್ದಾನೆ. ಫೆ.12ರಂದು ಚಿಕ್ಕಮಗಳೂರಿನ ಮದುವೆ ಕಾರ್ಯಕ್ರಮಕ್ಕೆ ಪ್ರಿಯಾಂಕ ಆಗಮಿಸಿದ್ದರು. ಮದುವೆ ಮುಗಿಸಿ ತವರು ಮನೆ ಮತ್ತಾವರ ಗ್ರಾಮಕ್ಕೆ ಬಂದು, ಕೆಲ ಸಮಯ ಕಳೆದು ನಂತರ ತಾಯಿ ಜೊತೆ ಕೈಮರ ಗ್ರಾಮಕ್ಕೆ ಬಂದು ಬೇಲೂರಿಗೆ ಬಸ್ ಹತ್ತಿದ್ದಾರೆ. ಬಳಿಕ ಬೇಲೂರಿನಲ್ಲಿ ಬಸ್ ಇಳಿದು » ನಾಲ್ಕನೇ ಪುಟದಲ್ಲಿ

ಶಿವರಾತ್ರಿ: ರುದ್ರವಿಲಾಸ ಮತ್ತು ಶಿವಕರುಣೆ

“ ಬೇಂದ್ರೆಯವರು ಶಿವತಾಂಡವವನ್ನೂ ಕಾಣಬಲ್ಲರು– ಶಿವನು ಬೆನ್ನ ಕೆಚ್ಚನ್ನು ತುಳಿದು ತಾಂಡವ ಪಾದಾಹತಿಯಲಿ ನೋಡುವವನು. ಭುಜದ ಭುಜಂಗನ ಕಚ್ಚಿಸಿ ರಸದ ವಿಷ ಹಿಳಿದು ನೋಡುವವನು. ಚಿತಾಭಸ್ಮದಲಿ ಹೊರಳಿಸಿ ನೋಡುವ/ ಮೈಯ ಮಲವ ತೊಳೆದು/ ಕಣ್ಣ ಕಿಚ್ಚಿನಲಿ ಹೊತ್ತಿಸಿ ನೋಡುವ/ ಜ್ಯೋತಿಯ ಎಳೆಯೆಳೆದು ಇದರ ಜೊತೆಗೇ ಗಂಗಾ ಜಲದಲಿ ಮುಳುಗಿಸಿ ನೋಡುವ ಎದೆಯಾಳವನಳೆದು ಮತ್ತು ರುಂಡವ ಹೂವೊಲು ಉರದಲಿ ಧರಿಸುವ ಕೊರಳಿಗೆ ಬರಸೆಳೆದು ಅವನಲ್ಲಿ ನವರಸವೂ ಇದೆ.

ಕಾಡುದಾರಿ ಕಾಶಿಯ ಮಣಿಕರ್ಣಿಕಾ ಘಾಟ್‌ನಲ್ಲಿ ಸಂಜೆಯ ಒಂದು ಹೊತ್ತು. ಶವಗಳು ಸಾಲು ಸಾಲಾಗಿ ಬರುತ್ತಲೇ ಇರುತ್ತವೆ. ಮಂಜುಳನಾದದೊಂದಿಗೆ ಹರಿಯುವ ಗಂಗೆಯ ದಡದಲ್ಲಿರುವ ಮಣಿಕರ್ಣಿಕೆಯ ಚಿತೆಗಳಿಗೆ ಕ್ಷಣವೂ ಬಿಡುವೇ ಇಲ್ಲ. ಚಿತೆಗಳು ಜೋರಾಗಿ ಉರಿಉರಿದಷ್ಟೂ ಅಲ್ಲೇ ಇರುವ ತಾರಕೇಶ್ವರ ದೇವಾಲಯದಲ್ಲಿ ಗಂಟೆ ಜಾಗಟೆಗಳ ನಿನಾದ ಜೋರಾಗುತ್ತದೆ.

ತುಸುದೂರದ ಎತ್ತರದ ಕಾಶಿ ವಿಶ್ವನಾಥ ದೇವಾಲಯದಿಂದಲೂ ಸಹಸ್ರ ಭಕ್ತರ ಹರ ಹರ ಮಹಾದೇವ ಎಂಬ ಘೋಷ ಕೇಳಿಬಂದಂತಾಗುತ್ತದೆ. ಗಂಗೆಯ ಆಚೆಗೆ ಸೂರ್ಯ ಮುಳುಗುತ್ತಿದ್ದರೆ ಸನಿಹದ ದಶಾಶ್ವಮೇಧ ಘಾಟ್‌ನಲ್ಲಿ ಗಂಗಾರತಿ ತಯಾರಿ ನಡೆಯುತ್ತಿರುತ್ತದೆ.

ಶವ ಸುಡಲು, ಬಂಧುಗಳ ಅಸ್ಥಿ ವಿಸರ್ಜನೆಗೆ, ಗಂಗಾರತಿ ನೋಡಲು, ವಿಶ್ವನಾಥನ ದರ್ಶನ ಮಾಡಲು, ಗಂಗೆಯಲ್ಲಿ ಮುಳುಗು ಹಾಕಿ ಪುನೀತರಾಗಲು ಬಂದವರೆಲ್ಲ ಒಂದೇ ಒಂದು ಭಾವದಲ್ಲಿ ತೊಯ್ದಂತಿರೆ– ಶಿವಮಯಂ ಜಗತ್. ಕವಿ ದ.ರಾ.ಬೇಂದ್ರೆಯವರು ಇದನ್ನೆಲ್ಲ ಕಂಡರೋ ಏನೋ. ಅದಕ್ಕೇ ಬರೆದರು– ರುದ್ರವಿಲಾಸದ ಪರಿಯೇ ಬೇರೆ/ ಶಿವ ಕರುಣೆಯು ಹಿರಿದು! ಒಂದು ಕಡೆ ಮಣಿಕರ್ಣಿಕೆಯಲ್ಲಿ ಹೊತ್ತಿ ಉರಿಯುತ್ತಿರುವ ಚಿತೆಗಳ ಸರಣಿ ಮೆರವಣಿಗೆ.

ಅಲ್ಲಿ ನಿಂತವರಿಗೆ ಕಾಲಾಗ್ನಿಯ ನಡುವೆ ನಿಂತಂಥ ಅನುಭವ ಖಚಿತ. ಅಲ್ಲಿಂದ ಎರಡೇ ಮೆಟ್ಟಲು ಈಚೆಗಿಳಿದರೆ ಶಿವ ಕರುಣೆಯಂತೆ ಗಂಗೆ ಪ್ರಾಂಜಲವಾಗಿ ಹರಿಯುತ್ತಿದ್ದಾಳೆ. ಅವಳು ಶಿವ ಜಟೆಯಿಂದಲೇ ಇಳಿದು ಬಂದವಳಲ್ಲವೇ? ಅಲ್ಲಿ ಮುಳುಗಿ ಏಳುತ್ತಿರುವವರ ಪಾಪರಾಶಿಗಳನ್ನೆಲ್ಲ ಆಕೆ ಕರುಣಾಪೂರ್ಣವಾಗಿ ಕೊಂಡೊಯ್ಯುತ್ತಿದ್ದಾಳೆ.

ಬೇಂದ್ರೆಯವರು ಶಿವತಾಂಡವವನ್ನೂ ಕಾಣಬಲ್ಲರು– ಶಿವನು ಬೆನ್ನ ಕೆಚ್ಚನ್ನು ತುಳಿದು ತಾಂಡವ ಪಾದಾಹತಿಯಲಿ ನೋಡುವವನು. ಭುಜದ ಭುಜಂಗನ ಕಚ್ಚಿಸಿ ರಸದ ವಿಷ ಹಿಳಿದು ನೋಡುವವನು. ಚಿತಾಭಸ್ಮದಲಿ ಹೊರಳಿಸಿ ನೋಡುವ/ ಮೈಯ ಮಲವ ತೊಳೆದು/ ಕಣ್ಣ ಕಿಚ್ಚಿನಲಿ ಹೊತ್ತಿಸಿ ನೋಡುವ/ ಜ್ಯೋತಿಯ ಎಳೆಯೆಳೆದು ಇದರ ಜೊತೆಗೇ ಗಂಗಾ ಜಲದಲಿ ಮುಳುಗಿಸಿ ನೋಡುವ ಎದೆಯಾಳವನಳೆದು ಮತ್ತು ರುಂಡವ ಹೂವೊಲು ಉರದಲಿ ಧರಿಸುವ ಕೊರಳಿಗೆ ಬರಸೆಳೆದು ಅವನಲ್ಲಿ ನವರಸವೂ ಇದೆ.

ಕಣ್ಣ ಕಿಚ್ಚಿನಿಂದ ಲೋಕವನ್ನು ಧಗಧಗಿಸುವ ರೌದ್ರವೂ ಚಿತಾಭಸ್ಮದಲ್ಲಿ ಹೊರಳಿಸುವ ಬೀಭತ್ಸವೂ ರುಂಡಮಾಲೆ ಧರಿಸುವ ಭಯಾನಕವೂ ಇದೆ. ಗಂಗಾಜಲದಲ್ಲಿ ಮುಳುಗಿಸಿ ನೋಡುವ ಶಾಂತವೂ ಇದೆ.

ಇದೆಲ್ಲವನ್ನೂ ಸಹಿಸಿಕೊಂಡು, ಅರ್ಪಿಸಿಕೊಂಡು ನೋಡಿದಾಗಲೇ ಶಿವನು ತನ್ನ ಹೃದಯವನ್ನು ತೆರೆಯುವನು. ಮೊದಲು ನಿಮ್ಮ ಬಗೆಯನ್ನು ಬಗೆಬಗೆದು ಅಟ್ಟಹಾಸ ಕೆರಳಿಸಿ ನೋಡುವನು. ನಂತರ ಕೈಗೆ ಅಂಟಿಕೊಂಡ ಬ್ರಹ್ಮಕಪಾಲದಲ್ಲಿ ಅದ್ದಿ ಆಸೆಯನ್ನು ಪರೀಕ್ಷಿಸುವನು.

ಇದಕ್ಕೂ ಮೀರಿ, ಇದೆಲ್ಲವೆನಗಲ್ಲ, ಎನಗೆ ನೀನೇ ಬೇಕು ಎಂದರೆ ಮಾತ್ರ ತೆರೆವನು ಹೃದಯವನು. ಆಗ ಗೊತ್ತಾಗುತ್ತದೆ– ಶಿವಕಾರುಣ್ಯದ ಘನತೆಯೆ ಮಿಗಿಲು, ತಿಳಿದವರಾರದನು? ರುದ್ರವಿಲಾಸವೇ ದೊಡ್ಡದು, ಶಿವಕಾರುಣ್ಯ ಅದಕ್ಕಿಂತಲೂ ಹಿರಿದು.

ಹಾಗೆ ನೋಡಿದರೆ ಮಣಿಕರ್ಣಿಕೆ ಮಾತ್ರವಲ್ಲ, ಇಡೀ ಕಾಶಿಯೇ ಶಿವಕರುಣೆಯನ್ನು ಸದಾ ಬಾಯ್ತೆಗೆದು ಸಾರುತ್ತಿರುವಂತೆ ಕಾಣಿಸುವುದು. ಎಲ್ಲಿ ಹೋದರೂ ವಿಶ್ವನಾಥ, ಕೈಲಾಸನಾಥ, ಈಶ್ವರ, ಮಹಾದೇವ, ಕಾಲಭೈರವ, ಅನ್ನಪೂರ್ಣೆ, ದೇವಿಯರ ಮಂದಿರಗಳು. ಎಲ್ಲಿಯೂ ಹರಹರ ಮಹಾದೇವ.

ಪ್ರತಿ ಇರುಳೂ ಶಿವರಾತ್ರಿ. ನಮ್ಮ ನಿಮ್ಮಂಥ ಮನುಷ್ಯನಂತೆ ಅನಿಸುವವನು ಮಹಾದೇವ. ಅವನು ನಮ್ಮಂತೆಯೇ ಅಪೂರ್ಣ. ಅವನ ಭಾವನೆಗಳು ತೀವ್ರ. ಅವನು ಲಯಕರ್ತ. ಕೋಪಗೊಂಡಾಗ ತಾಂಡವ ನೃತ್ಯ ಮಾಡುತ್ತಾನೆ. ಜಗತ್ತೇ ನಡುಗುತ್ತದೆ. ದಕ್ಷನ ಯಾಗದಲ್ಲಿ ಸತಿಯ ದಹನದ ನಂತರ ಅವನು ಉಗ್ರನಾಗಿದ್ದಾನೆ– ದುಃಖದಿಂದ, ಪ್ರೀತಿಯಿಂದ, ವಿರಹದಿಂದ. ಆ ಕ್ಷಣದಲ್ಲಿ ಅವನು ದೇವನಲ್ಲ. ಅವನು ಪ್ರೀತಿಸಿದವಳನ್ನು ಕಳೆದುಕೊಂಡ ಒಬ್ಬ ಮಾನವ. ಅವನ ಕೋಪದಲ್ಲಿ ನೋವಿದೆ. ಅವನ ಸಂಹಾರದಲ್ಲಿ ವ್ಯಥೆ ಇದೆ. ಆದರೆ ಇದೇ ಶಿವನು ಪಾರ್ವತಿಯನ್ನು ನೋಡಿದಾಗ ಪ್ರೇಮಿಯೂ ಆಗುತ್ತಾನೆ. ಅವಳಿಗಾಗಿ ತಪಸ್ಸು ಮಾಡುತ್ತಾನೆ. ಅವಳೊಂದಿಗೆ ಹಾಸ್ಯವಾಡುತ್ತಾನೆ.

ಕುಟುಂಬ ಕಟ್ಟುತ್ತಾನೆ. ಗಣೇಶ–ಕಾರ್ತಿಕೇಯರ ತಂದೆಯಾಗುತ್ತಾನೆ. ಸ್ಮಶಾನವಾಸಿಯಾದವನು ಸಹ ಗೃಹಸ್ಥನಾಗುತ್ತಾನೆ. ಈ ವಿರೋಧಾಭಾಸವೇ ಅವನ ಸೌಂದರ್ಯ. ಏಕೆಂದರೆ ಮನುಷ್ಯ ಜೀವನವೂ ಇದೇ ವಿರೋಧಾಭಾಸಗಳ ಸಂಯೋಗ. ಶಿವನು ವಿರಾಗಿ, ಧ್ಯಾನಿ. ಹಿಮಾಲಯದ ಮೌನದಲ್ಲಿ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಾನೆ.

ಲೋಕದ ಗದ್ದಲ ಅವನನ್ನು ಕದಲಿಸುವುದಿಲ್ಲ, ಆದರೆ ಅದೇ ಶಿವನು ಭಕ್ತನ ಒಂದು ಓಂ ನಮಃ ಶಿವಾಯ ಕರೆಗೆ ಸ್ಪಂದಿಸುತ್ತಾನೆ. ಧ್ಯಾನದಲ್ಲಿದ್ದವನು ಕೂಡ ಕರುಣೆಯಿಂದ ಕಣ್ಣೀರಿಡುತ್ತಾನೆ. ಅವನು ಲೋಕಲೋಕಗಳ ಸಂಹಾರಕ. ಆದರೆ ಅವನ ಸಂಹಾರದಲ್ಲಿ ಕ್ರೌರ್ಯ ಇಲ್ಲ.

ಅದೊಂದು ಅವಶ್ಯಕತೆ. ಮರದ ಹಳೆಯ ಎಲೆಗಳು ಬಿದ್ದು ಹೊಸ ಚಿಗುರುಗಳಿಗೆ ದಾರಿ ಮಾಡಿ ಕೊಡುವಂತೆ, ಅವನ ಲಯವು ಹೊಸ ಸೃಷ್ಟಿಗೆ ನೆಲಹಾಸು. ಅವನು ಕೋಪದಿಂದ ಮೂರನೇ ಕಣ್ಣು ತೆರೆದಾಗ ಜಗತ್ತು ಉರಿಯಬಹುದು. ಆದರೆ ಅದೇ ಕಣ್ಣು ಕರುಣೆಯಿಂದ ಮುಚ್ಚಿದಾಗ ಜಗತ್ತು ಶಾಂತವಾಗುತ್ತದೆ.

ಶಿವನು ಮನುಷ್ಯರಿಗೆ ಹತ್ತಿರವಾಗುವುದೇ ಅವನ ಅಪೂರ್ಣತೆಯ ಮೂಲಕ. ಅವನು ಸಾಂಪ್ರದಾಯಿಕ ದೃಷ್ಟಿಯಲ್ಲಿ ಸುಂದರನಲ್ಲ. ಅವನು ರಾಜಗೌರವ ಬಯಸುವುದಿಲ್ಲ. ಅವನು ಶ್ಮಶಾನದಲ್ಲಿ ತಂಗಿ ಭೂತಗಣಗಳೊಂದಿಗೆ ಸುತ್ತಾಡುತ್ತಾನೆ. ಅವನು ಜೀವನದ ಕರಾಳ ಭಾಗವನ್ನೂ ತಳ್ಳಿಹಾಕುವುದಿಲ್ಲ. ನಮ್ಮೊಳಗಿನ ಭಯ, ಕೋಪ, ಆಸೆ, ವಿರಹ– ಇವೆಲ್ಲವನ್ನೂ ಒಪ್ಪಿಕೊಂಡ ದೇವರು ಶಿವ. ಬಹುಶಃ ಅದಕ್ಕೇ ಶಿವನ ಮುಂದೆ ನಿಂತಾಗ ನಾವು ನಮ್ಮ ಮುಖವಾಡಗಳನ್ನು ತೆಗೆದುಬಿಡುತ್ತೇವೆ. ಏಕೆಂದರೆ ನಮ್ಮೊಳಗಿನ ವಿಷವನ್ನೇ ಕಂಠದಲ್ಲಿ ಹಿಡಿಯಬಲ್ಲವನು. ಕೋಪವೂ ನಿನ್ನದು, ಪ್ರೀತಿಯೂ ನಿನ್ನದು.

ವಿರಹವೂ ನಿನ್ನದು, ವೈರಾಗ್ಯವೂ ನಿನ್ನದು. ಇವೆಲ್ಲವನ್ನೂ ಒಪ್ಪಿಕೊಂಡಾಗ ಮಾತ್ರ ನೀನು ಸಂಪೂರ್ಣ ಎಂದವನು ಹೇಳುತ್ತಿರುವಂತಿದೆ. ಶಿವನು ದೇವರಾಗಿದ್ದರೂ, ಮನುಷ್ಯನಂತೆ ಅನಿಸುವುದೇ ಅವನ ಮಹಿಮೆ. ಅವನು ದೂರದ ದೈವವಲ್ಲ, ನಮ್ಮೊಳಗಿನ ತೀವ್ರ ಭಾವನೆಯ ಹೆಸರು.

ಕಳೆದ ಕೆಲವು ದಿನಗಳಿಂದ ಐಟಿ ಕ್ಷೇತ್ರದಲ್ಲಿ ಎಐ ಉಂಟುಮಾಡುತ್ತಿರುವ ತಾಂಡವನೃತ್ಯ ಎಲ್ಲರನ್ನು ನಡುಗಿಸಿದೆ. ಇದಕ್ಕೆ ಕೊನೆಯೇ ಇಲ್ಲವೇ, ಕಷ್ಟಪಟ್ಟು ಓದಿ ಉದ್ಯೋಗ ಹಿಡಿದು ಬದುಕುವೆವೆಂದು ಬಂದರೆ ಕಾಣದ ಕೈಯೊಂದು ಉದ್ಯೋಗ ಕಿತ್ತುಕೊಂಡೀತೇ ಎಂಬ ಕಳವಳ, ನಿರಾಶೆ ಹರಡಿದಂತಿದೆ. ಶಿವರಾತ್ರಿಯ ಕತ್ತಲು ಬಹಳ ದಟ್ಟ.

ಆದರೆ ಮರುದಿನದ ಬೆಳಗೂ ಅಷ್ಟೇ ಪ್ರಖರ. ತ್ರಿಪುರ ಮಥನದ ಕಥೆ ನೆನಪಾಗುತ್ತಿದೆ. ಷಣ್ಮುಖನಿಂದ ಹತನಾದ ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿ ಬ್ರಹ್ಮದೇವನನ್ನು ಉದ್ದೇಶಿಸಿ ತಪಸ್ಸು ಮಾಡಿದರು. ಬ್ರಹ್ಮ ಪ್ರತ್ಯಕ್ಷನಾದಾಗ ನಾವು ಮೂರು ನಗರಗಳನ್ನು ನಿರ್ಮಿಸುತ್ತೇವೆ. ಅವು ಮೂರೂ ಒಂದೇ ಒಂದು ಬಾಣ ಪ್ರಯೋಗದ ಮುಖಾಂತರ ಮಾತ್ರವೇ ನಿರ್ನಾಮವಾಗುವಂತಿರಬೇಕು ಎಂಬ ವರ ಕೇಳಿದರು.

ಅಂಥ ವೀರನೊಬ್ಬ ಇರಲು ಸಾಧ್ಯವಿಲ್ಲ, ಹಾಗಾಗಿ ನಮಗೆ ಸಾವಿಲ್ಲ ಎಂಬುದು ಅವರ ಲೆಕ್ಕಾಚಾರ. ವರ ಸಿಕ್ಕಿತು. ಮಯಾಸುರ ಅವರಿಗಾಗಿ ಮೂರು ಅಭೇದ್ಯ ನಗರಗಳನ್ನು ನಿರ್ಮಿಸಿದ. ಮೊದಲನೆಯದು ಕಬ್ಬಿಣದ ನಗರ. ಮಧ್ಯದ್ದು ಬೆಳ್ಳಿಯ ಮತ್ತು ಮೂರನೆಯದು ಚಿನ್ನದ ನಗರಿ.

ಮೊದಲನೆಯದ್ದು ಭೂಮಿಯ ಮೇಲಿದ್ದರೆ, ಎರಡನೆಯದು ಆಕಾಶದಲ್ಲಿ ಮತ್ತು ಮೂರನೆಯದ್ದು ಸ್ವರ್ಗಲೋಕಕ್ಕೆ ಚಾಚಿ ಕೊಂಡಿತ್ತು. ಮೂರು ನಗರಗಳೂ ಸದಾ ತೇಲುತ್ತಾ, ಚಲಿಸುತ್ತಾ ಇರುತ್ತವೆ. ಅಷ್ಟಲ್ಲದೇ ಅವು ಸಾವಿರ ವರ್ಷಕ್ಕೊಮ್ಮೆ ಮಾತ್ರ ಸರಳರೇಖೆಗೆ ಬರುತ್ತವೆ. ಹಾಗೆ ಬರುವುದು ಪುಷ್ಯ ನಕ್ಷತ್ರ ಚಂದ್ರನನ್ನು ಸೇರಿದಾಗ ಮಾತ್ರ.

ತಾವು ಸಾವಿಲ್ಲದವರು ಎಂಬ ಅರಿವಿನಿಂದ ಅಸುರರ ಅಬ್ಬರ ಅತಿಯಾಯಿತು. ದೇವತೆಗಳ ಸಂಕಟ ನೋಡಲಾಗದೆ ಶಿವನೇ ತ್ರಿಪುರಾಸುರರ ನಾಶಕ್ಕೆ ಬಂದ. ಸಮರ ಆರಂಭವಾಯಿತು. ಶಿವನಿಗಾಗಿ ವಿನ್ಯಾಸಗೊಳಿಸಲಾದ ಯುದ್ಧ ರಥ ಅದ್ಭುತವಾಗಿತ್ತು. ಭೂಮಿಯೇ ರಥದ ದೇಹವಾಯಿತು.

ಸೂರ್ಯ ಚಂದ್ರರು ಅದರ ಚಕ್ರಗಳು. ಬ್ರಹ್ಮ ಸ್ವತಃ ರಥದ ಸಾರಥಿ. ಮೇರು ಪರ್ವತವೇ ಬಿಲ್ಲು. ವಾಸುಕಿಯೇ ಬಿಲ್ಲಿನ ದಾರ, ಮಹಾವಿಷ್ಣುವೇ ಬಾಣ. ಸಾವಿರ ವರ್ಷಕ್ಕೊಮ್ಮೆ ಪುಷ್ಯ ನಕ್ಷತ್ರ ಚಂದ್ರನನ್ನು ಸೇರುವ ಕ್ಷಣ ಬಂತು. ನಗರಗಳು ಒಂದೇ ರೇಖೆಗೆ ಬಂದವು.

ಕ್ಷಣಮಾತ್ರದಲ್ಲಿ ಬಾಣ ಬಿಟ್ಟು ಶಿವ ಅವುಗಳನ್ನು ಧ್ವಂಸ ಮಾಡಿದ. ಅಸುರರ ಅಹಂಕಾರ ಕುಸಿಯಿತು. ಈ ಕಥೆಯನ್ನು ಇಂದು ನಾವು ಎಐ ಯುಗದಲ್ಲಿ ಮನುಷ್ಯತ್ವದ ಕಥೆಯಾಗಿ ಓದಬಹುದು. ತಂತ್ರಜ್ಞಾನ, ವೇಗ, ಅಹಂಕಾರದ ಪ್ರತೀಕವಾಗಿ ಮೂರು ಪುರಗಳಿವೆ– ಅಸಂಖ್ಯಾತ ಮಾಹಿತಿಯ ಬಂಗಾರದ ನಗರವಾದ ಡೇಟಾ ಪುರ. ಇಲ್ಲಿ ಎಲ್ಲವನ್ನೂ ಚಿನ್ನದಂತೆಯೇ ಅಳೆದು ಸಂಗ್ರಹಿಸಲಾಗುತ್ತದೆ. ಎರಡನೆಯದು ಅಲ್ಗೋರಿದಂಗಳ ಪುರ. ಅದು ಬೆಳ್ಳಿಯದು. ಅಲ್ಲಿ ಲಾಜಿಕ್ ಮತ್ತು ಗಣನೆ. ಮನುಷ್ಯರಿಗಿಂತ ವೇಗವಾಗಿ ಅಲ್ಲಿ ನಿರ್ಧಾರ ತೆಗೆದುಕೊಳ್ಳಲ್ಪಡುತ್ತದೆ. ಮೂರನೆಯದು ಅಹಂಕಾರದ ಪುರ– ನಾವು ದೇವರಾಗಿಬಿಟ್ಟೆವು, ಸೃಷ್ಟಿ ನಮ್ಮ ಕೈಯಲ್ಲಿದೆ– ಎಂಬ ನಿಯಂತ್ರಣದ ಮೋಹದ ಕಬ್ಬಿಣದ ನಗರ. ಈ ಮೂರು ಪುರಗಳು ಒಂದಾಗಿ ನಿಂತಾಗ, ಮನುಷ್ಯತ್ವದ ಮೇಲೆ ನೆರಳು ಬೀಳುತ್ತದೆ.

ನಾವು ಸೃಷ್ಟಿಸಿದ ಯಂತ್ರಗಳು ನಮ್ಮ ಜೀವನದ ಬಗ್ಗೆಯೇ ನಿರ್ಧಾರ ತೆಗೆದುಕೊಳ್ಳುತ್ತವೆ. ವೇಗವು ವಿವೇಕವನ್ನು, ಮಾಹಿತಿ ಕರುಣೆಯನ್ನು ಮರೆಮಾಡುತ್ತದೆ. ಈ ತ್ರಿಪುರಗಳನ್ನು ಧ್ವಂಸ ಮಾಡುವ ಶಿವ ಮನುಷ್ಯ ಚೇತನ. ಎಐ ಅಪಾರ ಬುದ್ಧಿಮತ್ತೆ ಹೊಂದಿರಬಹುದು. ಆದರೆ ಅದು ಅನುಭವಿಸುವುದಿಲ್ಲ. ಅದು ಲೆಕ್ಕಿಸುತ್ತದೆ, ಕಣ್ಣೀರು ಸುರಿಸುವುದಿಲ್ಲ. ಅದು ವಿಶ್ಲೇಷಿಸುತ್ತದೆ, ಪ್ರೀತಿಸುವುದಿಲ್ಲ.

ಮನುಷ್ಯಕುಲದ ಮೇಲೆ ಅದಕ್ಕೆ ಯಾವ ಕರುಣೆಯೂ ಇಲ್ಲ. ನಮ್ಮ ಚೈತನ್ಯದ ಕರುಣೆ, ನಮ್ಮ ನೈತಿಕತೆ, ನಮ್ಮ ಜವಾಬ್ದಾರಿ– ಇವೆಲ್ಲ ಶಿವನ ಬಾಣದಂತೆ, ಒಟ್ಟಾಗಿ ಕೆಲಸ ಮಾಡಿದಾಗ, ತಂತ್ರಜ್ಞಾನದ ಅಹಂಕಾರಕ್ಕೆ ತಡೆ ಹಾಕಬಲ್ಲವು. ಹಾಗಂತ ತ್ರಿಪುರ ಮಥನ ಎಂದರೆ ಕೇವಲ ಸಂಹಾರವಲ್ಲ. ಅದು ಸೃಷ್ಟಿಯ ಸಮತೋಲನ.

ಶಿವನು ತಂತ್ರಜ್ಞಾನವನ್ನು ವಿರೋಧಿಸುವುದಿಲ್ಲ. ಅವನು ಅದರ ಅಹಂಕಾರವನ್ನು ಮಾತ್ರ ಸಂಹರಿಸುತ್ತಾನೆ. ಯಂತ್ರಗಳನ್ನು ಉಪಯೋಗಿಸೋಣ, ಆದರೆ ಅವುಗಳಿಗೆ ನಮ್ಮ ಮನಸ್ಸನ್ನು ಒಪ್ಪಿಸುವುದು ಬೇಡ. ವೇಗವನ್ನು ಸ್ವೀಕರಿಸೋಣ, ಆದರೆ ಮೌಲ್ಯಗಳನ್ನು ಕಳೆದುಕೊಳ್ಳದಿರೋಣ. ಸೃಷ್ಟಿಸೋಣ, ಆದರೆ ದೇವರಾಗುವ ಮೋಹಕ್ಕೆ ಒಳಗಾಗುವುದು ಬೇಡ ಎನ್ನುತ್ತಾನೆ ನಮ್ಮ ಶಿವ. ಹಾಗೆ ನೋಡಿದರೆ ತ್ರಿಪುರ ಮಥನದ ನಿಜವಾದ ರಣಭೂಮಿ ನಮ್ಮೊಳಗೇ ಇದೆ.

ನಾವು ತಂತ್ರಜ್ಞಾನವನ್ನು ನಿಯಂತ್ರಿಸುತ್ತೇವಾ ಅಥವಾ ಅದು ನಮ್ಮ ಗಮನ, ಸಮಯ, ಭಾವನೆಗಳನ್ನು ನಿಯಂತ್ರಿಸುತ್ತಿದೆಯಾ ಅಂತ ನೋಡಿಕೊಳ್ಳಬೇಕು. ಅ ಶಿವನೂ ಇದ್ದಾನೆ. ಶಿವರಾತ್ರಿ ಎಂದರೆ ಮನುಷ್ಯತ್ವವನ್ನು ಉಳಿಸಿಕೊಳ್ಳುವ ಕಾಲ.

– ಹರೀಶ್ ಕೇರ

ಶಿವರಾತ್ರಿ: ದೇಹಶುದ್ಧಿಯೆಂಬ ಚಿತ್ತಶುದ್ಧಿವರೆಗೆ

» ಆಹಾರದಲ್ಲಿ ಕಟು–ತಿಕ್ತ–ಕಷಾಯ ರಸ ಪ್ರಧಾನ, ಉಷ್ಣ, ಲಘು, ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಬಳಸಿ; ಹಳೆಯ ಧಾನ್ಯಗಳು, ಜೋಳ, ಯವ, ಕೆಂಪು ಅಕ್ಕಿ, ಹೆಸರು ಬೇಳೆ, ಮಜ್ಜಿಗೆ ಉಪಯುಕ್ತ. ಸಿಹಿ–ಹುಳಿ–ಉಪ್ಪು, ಅತಿ ಸ್ನಿಗ್ಧ, ತಣ್ಣನೆಯ, ಜೀರ್ಣಕ್ಕೆ ಜಡವಾದ ಆಹಾರ, ಉದ್ದಿನಬೇಳೆ, ಮೈದಾ, ಪನ್ನೀರ್, ಸಿಹಿತಿಂಡಿಗಳು, ಹಾಲಿನ ಶೇಕ್, ಕರಿದ ಪದಾರ್ಥಗಳನ್ನು ತಪ್ಪಿಸಬೇಕು.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಫಾಲ್ಗುಣ ಮಾಸದ ಮಧುರ ರಾತ್ರಿಯಲ್ಲಿ, ಪ್ರಕೃತಿ ನಿಧಾನವಾಗಿ ತನ್ನ ನಿದ್ರೆಯಿಂದ ಎಚ್ಚರ ಗೊಳ್ಳಲು ಸಿದ್ಧವಾಗಿರುವಾಗ, ಮಹತ್ವದ ಮತ್ತು ಪವಿತ್ರವಾದ ಒಂದು ರಾತ್ರಿ ನಮ್ಮ ಜೀವನದಲ್ಲಿ ಆಗಮಿಸುತ್ತದೆ– ಅದುವೇ ಮಹಾಶಿವರಾತ್ರಿ. ಇದು ಕೇವಲ ಹಬ್ಬವಲ್ಲ, ಇದು ಜಾಗೃತಿ. ಇದು ಕೇವಲ ಆಚರಣೆ ಅಲ್ಲ; ಇದು ಒಳಗಿನ ಪರಿವರ್ತನೆ.

ಈ ಮಹಾರಾತ್ರಿಯು, ಪ್ರಕೃತಿಯಲ್ಲಿಯೂ ಮತ್ತು ನಮ್ಮ ಅಂತರಂಗದಲ್ಲಿಯೂ ನಡೆಯುವ ಸೂಕ್ಷ್ಮ ಬದಲಾವಣೆಗಳನ್ನು ಅರಿಯುವ ಒಂದು ಆಧ್ಯಾತ್ಮಿಕ ಅವಕಾಶ. ಆಯುರ್ವೇದದ ದೃಷ್ಟಿಯಿಂದ ನೋಡಿದರೆ, ಶಿವರಾತ್ರಿ ಸಂಭವಿಸುವ ಕಾಲವೇ ಒಂದು ಮಹತ್ವದ ಸಂಧಿಕಾಲ.

ಶಿಶಿರ ಋತುವಿನ ತಂಪು ಮತ್ತು ಜಡತ್ವದ ನಂತರ, ವಸಂತ ಋತು ತನ್ನ ಮೃದು ಚೈತನ್ಯವನ್ನು ವ್ಯಕ್ತಗೊಳಿಸಲು ಪ್ರಾರಂಭಿಸುತ್ತದೆ. ಶಿಶಿರದಲ್ಲಿ ಸಂಚಿತವಾದ ಕಫ ದೋಷವು, ವಸಂತದಲ್ಲಿ ಪ್ರಚೋದಿತವಾಗುತ್ತದೆ. ದೇಹದಲ್ಲಿ ಕಫ ದೋಷವು ವಸಂತದಲ್ಲಿ ಪ್ರಕೋಪ ಗೊಳ್ಳುತ್ತದೆ ಎಂದು ಆಯುರ್ವೇದ ಹೇಳುತ್ತದೆ.

ಈ ಸಮಯದಲ್ಲಿ ದೇಹದಲ್ಲಿ ಭಾರ, ಆಲಸ್ಯ, ಹೆಚ್ಚು ನಿದ್ರೆ, ಮಂದಾಗ್ನಿ, ಕಫ ಸಂಬಂಧಿತ ಸ್ವಸ್ಥತೆಗಳು ಕಾಣಿಸಬಹುದು. ಪ್ರಕೃತಿಯಲ್ಲಿರುವ ಮಂಜು ಕರಗುವಂತೆ, ದೇಹದಲ್ಲಿಯೂ ಸಂಚಿತವಾದ ಕಫ ಬಿಸಿಲಿನ ಪ್ರಭಾವದಿಂದ ದ್ರವೀಕೃತವಾಗಿ ಚಲನೆಯತ್ತ ಸಾಗುತ್ತದೆ.

ಇಂಥ ಸಂಧಿಕಾಲದಲ್ಲಿಯೇ ಶಿವರಾತ್ರಿಯ ಆಚರಣೆಯು ನಮಗೆ ಅರಿವು ಮೂಡಿಸುತ್ತದೆ– ಸ್ತಬ್ಧತೆಯಿಂದ ಚೈತನ್ಯದತ್ತ ಸಾಗುವ ಕಾಲ ಬಂದಿದೆ ಎಂದು. ಈ ರಾತ್ರಿಯ ಅಧಿಪತಿ, ಯೋಗೇಶ್ವರನಾದ ಶಿವನು, ತಮಸ್ಸನ್ನು ಭಸ್ಮಗೊಳಿಸುವ ಜ್ಞಾನಸ್ವರೂಪಿ. ಶಿವನ ತತ್ತ್ವವೇ ಲಯ ಮತ್ತು ಪುನರುದಯ.

ಅವನ ತೃತೀಯ ನೇತ್ರವು ಅನವನ್ನು ದಹಿಸುವ ಜ್ಞಾನಾಗ್ನಿಯ ಪ್ರತೀಕ. ವಸಂತದಲ್ಲಿ ಪ್ರಕೃತಿ ಪುಷ್ಪಿಸುವಂತೆ, ಶಿವರಾತ್ರಿಯು ನಮ್ಮ ಅಂತರಂಗದ ಪುನರ್ಜನ್ಮಕ್ಕೆ ಆಹ್ವಾನ ನೀಡುತ್ತದೆ.

ಋತುಸಂಧಿ ಮತ್ತು ವಸಂತ ಋತುಚರ್ಯೆ ಸಾಮಾನ್ಯವಾಗಿ ಫೆಬ್ರವರಿ ಮಧ್ಯದಿಂದ ಏಪ್ರಿಲ್ ಮಧ್ಯದವರೆಗೆ ವಸಂತ ಋತು ವ್ಯಾಪಿಸುತ್ತದೆ. ಈ ಸಮಯದಲ್ಲಿ ಪ್ರಕೃತಿ ನಿರ್ಮಲವಾಗಿರುತ್ತದೆ, ಸೂರ್ಯನ ಕಿರಣಗಳು ತಾಮ್ರವರ್ಣದ ತೇಜಸ್ಸಿನಿಂದ ಹೊಳೆಯುತ್ತವೆ, ದಕ್ಷಿಣಗಾಳಿ ಬೀಸುತ್ತದೆ, ಮರಗಳು ಹೊಸ ಮೊಗ್ಗು, ಎಲೆಗಳಿಂದ ಅರಳುತ್ತವೆ; ಕೋಗಿಲೆ ಮತ್ತು ಜೇನುಹುಳುಗಳ ಮಧುರ ಧ್ವನಿಯಿಂದ ಭೂಮಿ ಮಿಡಿಯುತ್ತದೆ.

ಆದರೆ ದೇಹದೊಳಗೆ ನಡೆಯುವ ಪ್ರಕ್ರಿಯೆ ಇನ್ನೂ ಸೂಕ್ಷ್ಮ. ಹಿಮಶೀತಲ ವಾತಾವರಣದಲ್ಲಿ ಮತ್ತು ಸ್ನಿಗ್ಧ–ಗುರು ಆಹಾರದಿಂದ ಶಿಶಿರದಲ್ಲಿ ಸಂಚಿತವಾದ ಕಫ, ವಸಂತದಲ್ಲಿ ಸೂರ್ಯನ ಉಷ್ಣತೆಯಿಂದ ಕರಗಿ ಪ್ರಚೋದಿತವಾಗುತ್ತದೆ.

ಈ ದ್ರವೀಕೃತ ಕಫವು ಅಗ್ನಿಯನ್ನು ನೇರವಾಗಿ ಕುಂಠಿತಗೊಳಿಸಿ ಜೀರ್ಣಶಕ್ತಿಯನ್ನು ಕಡಿಮೆ ಮಾಡುತ್ತದೆ. ಪರಿಣಾಮವಾಗಿ ಅಜೀರ್ಣ, ಕಫ ಸಂಬಂಧಿ ರೋಗಗಳು– ಕೆಮ್ಮು, ಅಸ್ತಮಾ, ಅಲರ್ಜಿ, ಶ್ವಾಸಕೋಶ ತೊಂದರೆಗಳು, ಜ್ವರ, ತಲೆನೋವು, ಮಧುಮೇಹ ಇತ್ಯಾದಿ– ಕಾಣಿಸಬಹುದು.

ದೇಹಬಲ ಮಧ್ಯಮವಾಗಿರುವ ಈ ಕಾಲದಲ್ಲಿ, ಕಫ ಹೆಚ್ಚು ಪ್ರಚೋದಿತವಾಗಿದ್ದರೆ ಪಂಚಕರ್ಮ ಕ್ರಮಗಳಾದ ವಮನ, ನಸ್ಯ, ಧೂಮಪಾನ, ಗಂಡೂಷ (ಪರಿಣತ ವೈದ್ಯರ ಮಾರ್ಗದರ್ಶನದಲ್ಲಿ) ಉಪಕಾರಿಯಾಗುತ್ತವೆ.

ಸೌಮ್ಯ ಕಫ ವಿಕೃತಿಯಲ್ಲಿ, ಸರಿಯಾದ ವಸಂತ ಋತುಚರ್ಯೆಯೇ ಸಮರ್ಪಕ ಪರಿಹಾರ. ಅಭ್ಯಂಗ ಮತ್ತು ನಸ್ಯ (ಎಳ್ಳೆಣ್ಣೆಯಂಥ ಕಫಹರ ತೈಲಗಳಿಂದ), ಉದ್ವರ್ತನ, ಮಿತ ವ್ಯಾಯಾಮ (ಅರ್ಧಶಕ್ತಿ ಮಟ್ಟದವರೆಗೆ), ಹಗಲು ನಿದ್ರಾ ತ್ಯಾಗ– ಇವು ಅತ್ಯವಶ್ಯಕ.

ಆಹಾರದಲ್ಲಿ ಕಟು–ತಿಕ್ತ–ಕಷಾಯ ರಸ ಪ್ರಧಾನ, ಉಷ್ಣ, ಲಘು, ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಬಳಸಿ; ಹಳೆಯ ಧಾನ್ಯಗಳು, ಜೋಳ, ಯವ, ಕೆಂಪು ಅಕ್ಕಿ, ಹೆಸರು ಬೇಳೆ, ಮಜ್ಜಿಗೆ ಉಪಯುಕ್ತ. ಸಿಹಿ–ಹುಳಿ–ಉಪ್ಪು, ಅತಿ ಸ್ನಿಗ್ಧ, ತಣ್ಣನೆಯ, ಜೀರ್ಣಕ್ಕೆ ಜಡವಾದ ಆಹಾರ, ಉದ್ದಿನಬೇಳೆ, ಮೈದಾ, ಪನ್ನೀರ್, ಸಿಹಿತಿಂಡಿಗಳು, ಹಾಲಿನ ಶೇಕ್, ಕರಿದ ಪದಾರ್ಥಗಳನ್ನು ತಪ್ಪಿಸಬೇಕು.

ಮೊಸರು ಸಂಪೂರ್ಣವಾಗಿ ನಿಷಿದ್ಧ. ಅಗ್ನಿ ಸ್ಥಿತಿಯನ್ನು ಪರಿಗಣಿಸಿ ಉಪವಾಸ ಆಚರಿಸಬಹುದು. ಹಗಲು ಊಟದ ನಂತರ ನಿದ್ರೆ, ಸಂಪೂರ್ಣ ವರ್ಜ್ಯ. ಜಾಗರಣೆ: ಭಕ್ತಿಯಷ್ಟೇ ಅಲ್ಲ, ಆಯುರ್ವೇದದ ಜ್ಞಾನವೂ ಹೌದು

ಶಿವರಾತ್ರಿಯ ಪ್ರಮುಖ ಆಚರಣೆಗಳಲ್ಲಿ ಜಾಗರಣೆ ಒಂದು. ಇಡೀ ರಾತ್ರಿ ಜಾಗರಣೆಯಿಂದ ಭಜನೆ, ಧ್ಯಾನ, ಜಪ ಮಾಡುವ ಪದ್ಧತಿ ಇದೆ. ಸಾಮಾನ್ಯವಾಗಿ ರಾತ್ರಿ ಕಾಲವು ಕಫ ಮತ್ತು ತಮಸ್ಸಿನ ಪ್ರಭಾವದ ಸಮಯ. ನಿದ್ರೆ ಸ್ವಾಭಾವಿಕವಾಗಿ ದೇಹವನ್ನು ವಿಶ್ರಾಂತಿಗೊಳಿಸಿದರೂ, ವಸಂತದ ಆರಂಭದಲ್ಲಿ ಅಧಿಕ ನಿದ್ರೆ ಕಫದ ವೃದ್ಧಿಗೆ ಕಾರಣವಾಗಬಹುದು.

ಆಯುರ್ವೇದವು ಹೇಳುವಂತೆ, ಕಫದ ಪ್ರಾಬಲ್ಯವಿರುವ ಕಾಲದಲ್ಲಿ ಲಘು, ಚುರುಕು, ಉತ್ಸಾಹಭರಿತ ಕ್ರಮಗಳು ಅಗತ್ಯ. ಶಿವರಾತ್ರಿಯ ಜಾಗರಣೆ, ಆಧ್ಯಾತ್ಮಿಕವಾಗಿ ಜಾಗೃತಿ ನೀಡುವುದರೊಂದಿಗೆ, ದೇಹದಲ್ಲಿ ಸಂಚಿತವಾದ ಭಾರವನ್ನು ತಗ್ಗಿಸುವ ಒಂದು ಸೂಕ್ಷ್ಮ ಉಪಾಯವೂ ಆಗಬಹುದು.

ಇಡೀ ರಾತ್ರಿ ಜಪ ಮತ್ತು ಧ್ಯಾನದಲ್ಲಿ ಕಳೆಯುವುದರಿಂದ ಮನಸ್ಸು ತಮಸ್ಸಿನಿಂದ ಸತ್ವದತ್ತ ಸಾಗುತ್ತದೆ. ಇದು ಕೇವಲ ದೇಹದ ಜಾಗರಣೆ ಅಲ್ಲ, ಜತೆಗೆ ಚೇತನದ ಜಾಗೃತಿಯೂ ಹೌದು.

ಜಾಗರಣೆ ಎಂದರೆ ಕೇವಲ ನಿದ್ರೆ ತ್ಯಜಿಸುವುದು ಅಲ್ಲ; ಅಜ್ಞಾನವನ್ನು ತ್ಯಜಿಸುವುದು. ಆಯುರ್ವೇದದ ತ್ರಿಗುಣ ಸಿದ್ಧಾಂತದ ಪ್ರಕಾರ, ಕಫ ಮತ್ತು ತಮಸ್ಸು ಭಾರ, ಜಡತ್ವ, ಆಲಸ್ಯವನ್ನು ಸೂಚಿಸುತ್ತವೆ. ಶಿವರಾತ್ರಿಯ ಆ ಭಾರವನ್ನು ಕರಗಿಸಿ, ಚೈತನ್ಯವನ್ನು ಉಜ್ಜೀವನಗೊಳಿಸುವ ಒಂದು ಸನ್ನಿವೇಶ.

ಉಪವಾಸ: ಕಫ ಶಮನ ಮತ್ತು ಅಗ್ನಿದೀಪನ ಶಿವರಾತ್ರಿಯ ಉಪವಾಸದ ಮತ್ತೊಂದು ಆಯಾಮವನ್ನು ಆಯುರ್ವೇದ ಸ್ಪಷ್ಟಪಡಿಸುತ್ತದೆ. ಕಫದ ಪ್ರಾಬಲ್ಯದಲ್ಲಿ ಲಂಘನಂ– ಉಪವಾಸವು ಮೊದಲ ಚಿಕಿತ್ಸೆ. ಉಪವಾಸವು ಅಗ್ನಿಯನ್ನು ಪ್ರಜ್ವಲಿತಗೊಳಿಸುತ್ತದೆ, ಆಮವನ್ನು ಕರಗಿಸುತ್ತದೆ.

ಲಘು ಆಹಾರ, ಫಲಾಹಾರ ಅಥವಾ ನಿರ್ಜಲ ವ್ರತ– ನಿಮ್ಮ ದೇಹಸ್ಥಿತಿಗೆ ಅನುಗುಣವಾಗಿ ಯಾವ ರೂಪದ ಆಚರಿಸಿದರೂ, ಅದು ದೇಹಕ್ಕೆ ವಿಶ್ರಾಂತಿ ನೀಡುವ ಒಂದು ಅವಕಾಶ.

ವಸಂತ ಋತುವಿನಲ್ಲಿ ಮಂದವಾಗಿರುವ ಜಠರಾಗ್ನಿಗೆ ಉಪವಾಸವು ಚೈತನ್ಯ ನೀಡುತ್ತದೆ. ದೇಹದಲ್ಲಿ ಸಂಚಿತವಾದ ವಿಷಮಯ ಪದಾರ್ಥಗಳನ್ನು ಹೊರಹಾಕುವ ಪ್ರಕ್ರಿಯೆಗೆ ಇದು ಚಾಲನೆ ನೀಡುತ್ತದೆ. ಈ ರೀತಿ ನೋಡಿದರೆ, ಶಿವರಾತ್ರಿ ಉಪವಾಸವು ಕೇವಲ ಭಕ್ತಿಯ ಆಚರಣೆ ಅಲ್ಲ, ಜತೆಗೆ ಋತುಚರ್ಯೆಯ ಭಾಗ.

ರಾತ್ರಿಯ ಅಂಧಕಾರ ಮತ್ತು ಒಳಗಿನ ಬೆಳಕು: ಶಿವರಾತ್ರಿಯನ್ನು ಕತ್ತಲೆಯ ಮಧ್ಯದಲ್ಲಿ ಆಚರಿಸಲಾಗುತ್ತದೆ. ಅಮಾವಾಸ್ಯೆಯ ಸಮೀಪದ ಈ ರಾತ್ರಿಯಲ್ಲಿ, ಹೊರಗಿನ ಅಂಧಕಾರವು ಗಾಢವಾಗಿರುತ್ತದೆ. ಆದರೆ ಈ ಅಂಧಕಾರದ ನಾವು ದೀಪ ಹಚ್ಚುತ್ತೇವೆ, ಜಪ ಮಾಡುತ್ತೇವೆ, ಶಿವನ ಧ್ಯಾನದಲ್ಲಿ ತಲ್ಲೀನರಾಗುತ್ತೇವೆ. ಇದು ಒಂದು ಆಂತರಿಕ ಸಂದೇಶ– ಹೊರಗಿನ ಕತ್ತಲೆಯ ನಡುವೆ ಒಳಗಿನ ಬೆಳಕನ್ನು ಕಾಣುವ ಪ್ರಯತ್ನ.

ವಸಂತವು ಪುಷ್ಪಿಸುವ ಕಾಲ. ಮರಗಳ ಒಣ ಎಲೆಗಳು ಬಿದ್ದು, ಹೊಸ ಮೊಗ್ಗುಗಳು ಮೂಡುವ ಕಾಲ. ನಮ್ಮ ಜೀವನದಲ್ಲಿಯೂ ಹಳೆಯ ಸಂಸ್ಕಾರಗಳು, ಆಲಸ್ಯ, ಅಜ್ಞಾನ ಕರಗಿ, ಹೊಸ ಚೈತನ್ಯ ಮೂಡುವ ಸಮಯವೇ ಶಿವರಾತ್ರಿ. ಈ ಹಬ್ಬ ನಮಗೆ ಹೇಳುತ್ತದೆ: ನಿನ್ನೊಳಗಿನ ಕಫವನ್ನು ಕರಗಿಸು, ನಿನ್ನೊಳಗಿನ ತಮಸ್ಸನ್ನು ದಹಿಸು, ನಿನ್ನೊಳಗಿನ ಶಿವತತ್ತ್ವವನ್ನು ಅರಿತುಕೋ ಎಂದು.

ಋತುಸಂಧಿ: ಪರಿವರ್ತನೆಯ ಸನ್ನಿವೇಶ: ಶಿಶಿರದಿಂದ ವಸಂತಕ್ಕೆ ಬರುವ ಸಂಧಿಕಾಲವನ್ನು ಆಯುರ್ವೇದವು ಋತುಸಂಧಿ ಎಂದು ಕರೆಯುತ್ತದೆ. ಈ ಕಾಲದಲ್ಲಿ ದೇಹವು ಸೂಕ್ಷ್ಮವಾಗಿ ಬದಲಾವಣೆ ಅನುಭವಿಸುತ್ತದೆ. ಆಹಾರ, ಜೀವನಶೈಲಿ, ಚಿಂತನೆ–ಎಲ್ಲವೂ ಸಮತೋಲನದಲ್ಲಿರಬೇಕು.

ಶಿವರಾತ್ರಿ ಈ ಸಂಧಿಕಾಲದ ಬರುತ್ತದೆ ಎಂಬುದು ಅಸಾಧಾರಣ ಯಾದೃಚ್ಛಿಕತೆ ಅಲ್ಲ; ಅದು ಪ್ರಕೃತಿಯ ಸಂಗತಿ. ಈ ಸಮಯದಲ್ಲಿ ಲಘು ಆಹಾರ, ವ್ಯಾಯಾಮ, ಉಷ್ಣ ಜಲಪಾನ, ಕಫ ಶಮನ ಕ್ರಮಗಳು ಉಪಕಾರಿಯಾಗುತ್ತವೆ. ಶಿವರಾತ್ರಿಯ ಜಾಗರಣೆ ಮತ್ತು ಉಪವಾಸವು ಈ ಋತುಸಂಧಿಯಲ್ಲಿ ದೇಹ–ಮನಸ್ಸಿಗೆ ಸಮತೋಲನ ನೀಡುವ ಸಾಧನೆ.

ನಿದ್ರಾ ಸಮತೋಲನ ಮತ್ತು ಅಗ್ನಿ ಸಂರಕ್ಷಣೆ: ಶಿವರಾತ್ರಿಯಂದು ಜಾಗರಣೆ ಮಾಡಿದ ನಂತರದ ದಿನದ ಆಚರಣೆಯೂ ಆಯುರ್ವೇದದ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದು.

ಒಂದು ರಾತ್ರಿ ನಿದ್ರಾಭಾವವಾಗಿದೆಯಾದರೆ, ಅದನ್ನು ಸಮಚಿತ್ತದಿಂದ ಪೂರೈಸುವುದು ಅಗತ್ಯ. ಆಯುರ್ವೇದದಲ್ಲಿ ನಿದ್ರೆಯನ್ನು ತ್ರಯೋಪಸ್ತಂಭಗಳಲ್ಲಿ ಒಂದೆಂದು ಹೇಳಲಾಗಿದೆ; ಆದ್ದರಿಂದ ಅದರ ವ್ಯತ್ಯಯವನ್ನು ಸರಿಯಾಗಿ ಸಮತೋಲನಗೊಳಿಸಬೇಕು.

ಆಯುರ್ವೇದದ ಸೂಚನೆಯ ಪ್ರಕಾರ, ಶಿವರಾತ್ರಿಯ ಜಾಗರಣೆಯ ನಂತರದ ದಿನ ಬೆಳಗ್ಗೆ ಮೊದಲಿಗೆ ದೇಹಕ್ಕೆ ಎಳ್ಳೆಣ್ಣೆಯ ಅಭ್ಯಂಗ ಮಾಡುವುದು ಶ್ರೇಯಸ್ಕರ. ನಂತರ ಉಷ್ಣಜಲ ಸ್ನಾನ ಮಾಡಬಹುದು. ಇದರ ಮೂಲಕ ಕಫ–ವಾತದ ಪ್ರಭಾವ ಶಮನವಾಗುತ್ತದೆ ಮತ್ತು ದೇಹ–ಮನಸ್ಸು ವಿಶ್ರಾಂತಿಗೊಳ್ಳಲು ಸಿದ್ಧವಾಗುತ್ತದೆ.

ಹಿಂದಿನ ರಾತ್ರಿ ಎಷ್ಟು ಹೊತ್ತು ನಿದ್ರೆ ತಪ್ಪಿದೆಯೋ, ಅದರ ಅರ್ಧ ಪ್ರಮಾಣದಷ್ಟು ನಿದ್ರೆಯನ್ನು ಮುಂದಿನ ದಿನ ಪೂರೈಸಬಹುದು. ಉದಾಹರಣೆಗೆ, ಆರು ಗಂಟೆಗಳ ನಿದ್ರೆ ತಪ್ಪಿದ್ದರೆ, ಮುಂದಿನ ದಿನ ಖಾಲಿ ಹೊಟ್ಟೆಯಲ್ಲಿ ಮೂರು ಗಂಟೆಗಳಷ್ಟು ನಿದ್ರೆ ಮಾಡಬಹುದು. ಇದು ಆಹಾರ ಸೇವನೆಯ ಮೊದಲು ಇರಬೇಕು.

ಎದ್ದು ಬಂದ ನಂತರ, ತಮ್ಮ ನಿಯತ ಆಹಾರ ಸಮಯಕ್ಕೆ ಅನುಗುಣವಾಗಿ, ಲಘು, ಉಷ್ಣ ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಸೇವಿಸಬೇಕು. ಜಾಗರಣೆಯ ನಂತರದ ದಿನ ಹೊಟ್ಟೆತುಂಬ ಊಟ ಮಾಡಿ ನಂತರ ನಿದ್ರೆ ಮಾಡುವುದರಿಂದ ಕಫದ ಪ್ರಚೋದನೆ ಹೆಚ್ಚಾಗಿ ದೇಹದಲ್ಲಿ ಭಾರ, ಆಲಸ್ಯ, ಅಜೀರ್ಣ ಮುಂತಾದ ತೊಂದರೆಗಳು ಉಂಟಾಗುವ ಸಾಧ್ಯತೆ ಇದೆ.

ಜಾಗರಣೆಯಿಂದ ಅಗ್ನಿಯೂ ಸ್ವಲ್ಪ ಮಂದಗೊಳ್ಳುವ ಸಾಧ್ಯತೆ ಇರುವುದರಿಂದ, ಜೀರ್ಣಕ್ಕೆ ಕಷ್ಟವಾದ ಆಹಾರವನ್ನು ತಪ್ಪಿಸುವುದು ಒಳಿತು. ಬದಲಾಗಿ ಲಘು, ಉಷ್ಣ, ಸುಪಾಚ್ಯ ಆಹಾರ– ಉದಾಹರಣೆಗೆ ಗಂಜಿ, ಸೂಪ್, ತಿಳಿಸಾರು ಅನ್ನ– ಸೇವಿಸುವುದು ದೇಹಕ್ಕೆ ಅನುಕೂಲಕರ.

ಈ ರೀತಿಯಾಗಿ ಜಾಗರಣೆ ಮಾಡಿದ ನಂತರವೂ ದೇಹದ ಸಮತೋಲನವನ್ನು ಕಾಪಾಡಿ ಕೊಳ್ಳುವುದು ಆಯುರ್ವೇದದ ಸೌಂದರ್ಯ. ಭಕ್ತಿಯೊಂದಿಗೆ ಆಚರಿಸಿದ ಶಿವರಾತ್ರಿ, ಜ್ಞಾನ ಪೂರ್ಣ ಕ್ರಮಗಳ ಮೂಲಕ ದೇಹ–ಮನಸ್ಸಿನ ಆರೋಗ್ಯವನ್ನೂ ರಕ್ಷಿಸಲಿ.

ಆಧ್ಯಾತ್ಮಿಕ ವಸಂತ: ವಸಂತವು ಕೇವಲ ಹೊರಗಿನ ಹೂವುಗಳ ಕಾಲವಲ್ಲ, ಜತೆಗೆ ಒಳಗಿನ ಅರಳಿಕೆಯ ಕಾಲವೂ ಹೌದು. ಶಿವರಾತ್ರಿ ನಮ್ಮೊಳಗಿನ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸುವ ಒಂದು ಸನ್ನಿವೇಶ. ಶಿವನ ಧ್ಯಾನದಲ್ಲಿ ಲೀನವಾಗುವಾಗ, ಮನಸ್ಸಿನ ಅಲೆಗಳು ಶಾಂತವಾಗುತ್ತವೆ. ತಮಸ್ಸು ಕರಗಿ, ಸತ್ವ ಬೆಳೆಯುತ್ತದೆ.

ಶಿವನ ಭಸ್ಮಾಭರಣವು ನಮಗೆ ಈ ಅಂಶವನ್ನು ಮನವರಿಕೆ ಮಾಡಿಕೊಡುತ್ತದೆ– ಎಲ್ಲವೂ ನಶ್ವರ, ಆದರೆ ಆತ್ಮಚೈತನ್ಯ ಶಾಶ್ವತ. ವಸಂತದ ಪುಷ್ಪಗಳು ಕ್ಷಣಿಕವಾದರೂ, ಅವು ನೀಡುವ ಸೌಂದರ್ಯ ಅನಂತ. ಅದೇ ರೀತಿ, ಜೀವನದ ಸಂಧಿಕಾಲಗಳು ತಾತ್ಕಾಲಿಕವಾದರೂ, ಅವು ನೀಡುವ ಜ್ಞಾನ ಶಾಶ್ವತ.

ಸ್ನೇಹಿತರೇ, ಮಹಾಶಿವರಾತ್ರಿ ಕೇವಲ ಒಂದು ಪರ್ವದಿನವಲ್ಲ; ಅದು ದೇಹ, ಮನಸ್ಸು ಮತ್ತು ಆತ್ಮದ ಸಮನ್ವಯದ ರಾತ್ರಿ. ವಸಂತ ಋತುವಿನ ಆರಂಭದಲ್ಲಿ, ಕಫದ ಪ್ರಾಬಲ್ಯವನ್ನು ಶಮನಗೊಳಿಸಿ, ಅಗ್ನಿಯನ್ನು ಪ್ರಜ್ವಲಿತಗೊಳಿಸಿ, ತಮಸ್ಸನ್ನು ದಹಿಸಿ, ಸತ್ವವನ್ನು ಅರಳಿಸುವ ಒಂದು ಅವಕಾಶವಿದು.

ಪ್ರಕೃತಿ ಪುಷ್ಪಿಸುವಂತೆ, ನಮ್ಮೊಳಗಿನ ಚೈತನ್ಯವೂ ಅರಳಲಿ. ಶಿವರಾತ್ರಿಯ ಜಾಗರಣೆ ಕೇವಲ ಕಣ್ಣು ತೆರೆಯುವ ಜಾಗರಣೆ ಆಗದೆ, ಚೇತನದ ಜಾಗರಣೆ ಆಗಲಿ. ಉಪವಾಸ ಕೇವಲ ಆಹಾರ ತ್ಯಾಗವಾಗದೆ, ಅಜ್ಞಾನದ ತ್ಯಾಗವಾಗಲಿ. ಈ ಮಹಾರಾತ್ರಿಯಲ್ಲಿ, ಹೊರಗಿನ ದೇವಾಲಯಗಳಿಗೆ ಮಾತ್ರವಲ್ಲದೆ, ನಮ್ಮೊಳಗಿನ ಹೃದಯಮಂದಿರಕ್ಕೂ ದೀಪ ಹಚ್ಚೋಣ.

ಕಫದ ಭಾರ ಕರಗಿಸಿ, ಮನಸ್ಸಿನ ಮಂಜು ದೂರ ಮಾಡಿ, ಶಿವತತ್ತ್ವದ ಪ್ರಕಾಶದಲ್ಲಿ ನಮ್ಮ ಜೀವನವನ್ನು ಪುನಃ ರೂಪಿಸೋಣ. ಇದೇ ಮಹಾಶಿವರಾತ್ರಿಯ ನಿಜವಾದ ವಸಂತ– ದೇಹದಲ್ಲಿ ಸಮತೋಲನ, ಮನಸ್ಸಿನಲ್ಲಿ ಶಾಂತಿ, ಆತ್ಮದಲ್ಲಿ ಜಾಗೃತಿ.

– ಡಾ. ಸಾಧನಾಶ್ರೀ ಪಿ,





ದೇವರೆಲ್ಲಿರುವನು?

ಪೂಜೆಯನ್ನೂ ಧ್ಯಾನವನ್ನೂ ಮಾಡದೆ ಇದ್ದರೂ, ನಾವು ಸತ್ಯಶೀಲರಾಗಿ ಬದುಕಿದರೆ, ದೇವರು ಸ್ವತಃ ನಮ್ಮ ಹೃದಯದಲ್ಲಿ ನೆಲೆಸುತ್ತಾನೆ. ಅಂದರೆ, ದೇವರನ್ನು ಹುಡುಕಲು ದೊಡ್ಡದೊಡ್ಡ ವಿಧಿ–ವಿಧಾನಗಳ ಅವಶ್ಯಕತೆ ಇಲ್ಲ. ಸತ್ಯ, ಪ್ರಾಮಾಣಿಕತೆ, ಮತ್ತು ಮನುಷ್ಯತ್ವ ಇವೇ ದೇವರ ನಿಜವಾದ ಪೂಜೆ. ತಮಗೆ ಸಾಧ್ಯವಾದಷ್ಟು ಇತರರಿಗೆ ಒಳ್ಳೆಯದನ್ನು ಮಾಡಿದರೆ ಅಷ್ಟೇ ಸಾಕು. ದೇವರು ಮನುಷ್ಯತ್ವಕ್ಕೆ ಪ್ರಸನ್ನನಾಗುತ್ತಾನೆ.

ಒಳಿತು ಮಾಡುವುದರಲ್ಲೇ ಸನಾತನ ಧರ್ಮದ ಸೌಂದರ್ಯ ಅಡಗಿದೆ. ಅಲ್ಲದೆ ಎಲ್ಲರಿಗೂ ಬಲವಂತವಿರದೆ ಸ್ವಚಿಂತನೆಯ ಸ್ವನಿರ್ಧಾರದ ಸ್ವಾತಂತ್ರ್ಯವೂ ಇದೆ, ಒಟ್ಟಿನಲ್ಲಿ ಪ್ರತಿಯೊಬ್ಬರೂ ಅತ್ಯುತ್ತಮ ಮನುಷ್ಯರಾಗುವುದು ಮುಖ್ಯ. ಸೇವಾಪರತೆಯ ಜೊತೆಗೆ ಭಗವಂತನನ್ನೂ ಸ್ಮರಿಸಿದರೆ ನಮ್ಮ ಜೀವನದ ಆನಂದಕ್ಕೆ ಮಿತಿ ಇಲ್ಲ!

ಸೇವೆಯು ಹೇಗಿರಬೇಕು? ಸೇವೆಯ ಸ್ವರೂಪವು ಹೇಗಿರಬೇಕೆಂಬುದು ನಮ್ಮ ವೈಯಕ್ತಿಕ ನಿರ್ಧಾರವಾಗಿರುತ್ತದೆ. ಸನಾತನ ಸಿದ್ದಾಂತಗಳು ಕೆಲವು ಸೇವೆಗಳನ್ನು ಜೀವನದ ಧರ್ಮವಾಗಿರಬೇಕೆಂದು ಸಾರುತ್ತವೆ. ಹಿರಿಯರ ಸೇವೆ ಮಾಡು ಎಂಬ ವಿಶೇಷ ಸೇವೆಯು ಜೀವನದ ಅನುಪಾಲನೀಯ ವಿಚಾರ. ಹಿರಿಯರ ಸೇವೆ ಮಾಡದೇ ಯಾವುದೇ ಸಾಮಾಜಿಕ ಸೇವೆಗಳು ಸತ್ಫಲ ನೀಡುವುದಿಲ್ಲ.

ಹಿರಿಯರೆಂದರೆ ಯಾರು? ಜನ್ಮ ಕೊಟ್ಟವರು, ಅವರ ಜನ್ಮದಾತರುಗಳು ಬದುಕಿದ್ದರೆ ಅವರೂ ಹಿರಿಯರೇ ಸರಿ. ಗುರುಗಳೂ ಹಿರಿಯರೇ ಆಗುತ್ತಾರೆ. ಅಣ್ಣ ಅಕ್ಕ ಅವರೂ ಹಿರಿಯರೇ ಆಗಿದ್ದಾರೆ. ಅಣ್ಣ ಅಕ್ಕ ಅಶಕ್ತರಾಗಿದ್ದರೆ ಮಾತ್ರ ಅವರು ಇತರರ ಸೇವೆಯನ್ನು ಬಯಸುತ್ತಾರೆ. ಅವರು ಸದೃಢರಾಗಿದ್ದರೆ ಅವರು ಅನ್ಯರ ಸೇವೆಯನ್ನು ಬಯಸುವುದಿಲ್ಲ, ವಯಸ್ಸಿನಲ್ಲಿ ಕಿರಿಯರಾದರೂ ಆಶಕ್ತತೆಯಿರುವುದಿದೆ. ಅಶಕ್ತ ಬಂಧುಗಳ ಸೇವೆಯೂ ಧರ್ಮವೇ ಆಗಿದೆ.

ನಮ್ಮ ಸಮಾಜದಲ್ಲಿ ಬಡತನವು ಹಾಸು ಹೊಕ್ಕಾಗಿದೆ. ಅವರಿಗೆ ಮಾಡುವ ನೆರವುಗಳು ಸೇವೆಯಾಗುತ್ತವೆ. ಮನೆಯಿಲ್ಲದವರಿಗೆ ಮನೆ, ಮನೆಗೆ ಜಾಗವಿಲ್ಲದವರಿಗೆ ಮನೆ ನೀವೇಶನ, ಆ ಮನೆಯ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯವಾಗುವುದು ಹೀಗೆ ಸೇವಾ ಮಾರ್ಗಗಳು ಅಸಂಖ್ಯ, ನಮ್ಮಿಂದ ದೊಡ್ಡ ಪ್ರಮಾಣದ ಸೇವೆ ಮಾಡಲಾಗದಿದ್ದರೆ ಇತರರ ಸಹಯೋಗ ಪಡೆದೂ ಸೇವೆ ಮಾಡಲು ಮನಸ್ಸು ಮಾಡಬೇಕಾಗುತ್ತದೆ. ಸಹಾಯ ಮಾಡಬಹುದಾದ ಇತರ ವ್ಯಕ್ತಿಗಳನ್ನು ತೋರಿಸಿಕೊಡುವುದೂ ಸೇವೆಯೇ ಆಗಿದೆಯೆಂಬುದನ್ನು ಮರೆಯಬಾರದು. ಕುಟುಂಬದ ಸದಸ್ಯರ ದುಂದುವೆಚ್ಚದ ಕಾರಣದಿಂದ ಬಡತನ ಬರುವುದಿದೆ. ಅವರ ದುಂದುವೆಚ್ಚಗಳನ್ನು ನಿಯಂತ್ರಿಸಲು ಮಾರ್ಗದರ್ಶನ ನೀಡುವುದೂ ಸೇವೆಯೇ ಹೌದಲ್ಲವೇ? ಈ ಎಲ್ಲ ಸೇವೆಗಳೊಳಗೂ ಭಗವಂತನಿರುತ್ತಾನೆ ಎಂದರೆ ನಮಗೆ ಭಗವದನುಗ್ರವಾಗುತ್ತದೆ. ದೇವರು ಎಲ್ಲಿರುವನೆಂದರೆ ಒಳಿತು ಮಾಡುವ ಮನಸ್ಸಿನೊಳಗಿರುತ್ತಾನೆ.

– ರಮೇಶ ಎಂ. ಬಾಯಾರು, ಬಂಟ್ವಾಳ

ಶುಭ ಶಿವರಾತ್ರಿ

ಲಿಂಗ ರೂಪದಲಿ
ಲೋಕಕಲ್ಯಾಣಾರ್ಥ ಶಿವ
ಕಲ್ಲಾದನಯ್ಯ

ಜಡೆಯ ಇಳೆಬಿಟ್ಟು
ಗಂಗೆಯನು ತರಲು ಧರೆಗೆ
ಭಗೀರಥನಾದನಯ್ಯ

ಸಮುದ್ರ ಮಂಥನದಲಿ
ಇಳಿಸಿ ಗಂಟಲಲಿ
ವಿಷಕಂಠ ಎನಿಸಿದನಯ್ಯ

ಭಕ್ತನ ಪೂಜೆಯಲಿ
ಬೇಡರ ಕಣ್ಣಪ್ಪನ
ಶ್ರದ್ಧೆಯ ಕಂಡನಯ್ಯ

ಕರೆದೊಯ್ಯಲು ಪಾಶದಲಿ
ಯಮನೇ ಹೆದರಿದ
ಶಿವಭಕ್ತ ಮಾರ್ಕಂಡಯ್ಯ

ಕಡು ಕೋಪದಲಿ
ಕೊಂದನಾದರೂ ರುದ್ರ
ಗಜಮುಖನ ಸೃಷ್ಟಿಸಿದನಯ್ಯ

ಪತ್ನಿ ಪಾರ್ವತಿಯ
ತನ್ನೊಳಗಿರಿಸಿಕೊಳ್ಳಲು
ಅವನಾದ ಅರ್ಧನಾರೀಶ್ವರ

ತಲೆಮೇಲೆ ಗಂಗೆ
ತೊಡೆಮೇಲೆ ಗೌರಿ
ನಿಂತಿಹನು ಹಿಂದೆ ನಂದಿ

ಒಬ್ಬನಿಗೆ ಇಲಿ ಸಾರಥಿ
ಮತ್ತೊಬ್ಬನಿಗೆ ನವಿಲು ಸಾರಥಿ
ಪುತ್ರರಿಬ್ಬರಿಂದ ಲೋಕಕ್ಕೆ ಕೀರ್ತಿ

ಶಿವ ಶಿವನೆಂದರೆ ಭಯವಿಲ್ಲ
ಶಿವ ನಾಮಕ್ಕೆ ಸಾಟಿ ಬೇರಿಲ್ಲ

–ಆರ್ ಶ್ರೀನಿವಾಸ್ ಉಳ್ಳಾವಳ್ಳಿ

ಭಾವ ಲಹರಿ

ಕನ್ನಡ ಕವನಗಳು

ನಿನ್ನ ನಾ ಕರೆಯುತ್ತಿದ್ದೇನೆ ಒಡತಿ

ಮಧು ಚಂದ್ರದ ಹುಣ್ಣಿಮೆಯ ದಿನ ನಿನ್ನ ಬರುವಿಕೆಗಾಗಿ ಕಾಯುತ್ತಿದ್ದೇನೆ ಒಡತಿ

ಮನದೊಳಗಿನ ಒಲವ ಹಾಗೇ ತಬ್ಬಿ ಹಿಡಿದು ನಿನಗಾಗಿಯೇ ಕುಳಿತ್ತಿದ್ದೇನೆ ಒಡತಿ

ಸುಖದ ಅಮಲಿನ ನಡುವೆ ಬೀಸುವ ತಂಗಾಳಿಗೆ ಮತ್ತಷ್ಟು ಮರೆಸಿದೆ ನಿದಿರೆಯನು

ಎದೆ ಬಯಕೆಯ ನಲಿವ ಉಲಿವ ಹೊಸ ಮನ್ವಂತರವ ಬಯಸುತ್ತಿದ್ದೇನೆ ಒಡತಿ

ಅರಳಿರುವ ಕೆಂಪು ಹೂವಿನ ನೆತ್ತರು ಹರಡದಿರಲಿ ಸುತ್ತ ಮುತ್ತಲು ಸುಖ ಇರುವಾಗ

ಪ್ರೀತಿ ಉಕ್ಕುತ್ತಿರುವ ಸಮಯ ಸನಿಹವೇ ಇರು ನೀನೆಂದೂ ಕೇಳುತ್ತಿದ್ದೇನೆ ಒಡತಿ

ಅರಮನೆಯೊಳಗಿನ ಒಲವಿನಾ ಸರೆಯ ಬದುಕು ಗೂಡೊಳಗೆ ಜೊತೆ ಬಾರದಿರಲಿ

ಬಡವರ ಗುಡಿಸಲಿನಲ್ಲಿ ಸಿಗುವ ನನಸಿನಾಳದ ಪ್ರೇಮಗಳ ಹುಡುಕುತ್ತಿದ್ದೇನೆ ಒಡತಿ

ಸಕಲ ವಾಲಗದೊಡನೆ ಹಸೆಮಣೆಯನ್ನೇರಿ ಶಾಸ್ತ್ರಗಳ ಮುಗಿಸಿ ಹೊರಟಿರುವೆ ಸವಿಯೆ

ನಲುಮೆಯ ಹೂವ ಮಂಚಕೆ ಮದನ ಇಂದ್ರನಾಗಿ ನಿನ್ನ ನಾ ಕರೆಯುತ್ತಿದ್ದೇನೆ ಒಡತಿ

ಜೀವ ನುಂಗಿದ ಗಾಳಿಪಟ ಹಾರಿಸುವ ಮಾಂಜಾ ದಾರ

ನನ್ನ ಹಳೆಯ ದ್ವಿಚಕ್ರವಾಹನದಲ್ಲಿ ಹೆಲ್ಮೆಟ್ ಹಾಕಿಕೊಂಡೇ ಮಗಳನ್ನು ಕರೆತರಲು ಹೋಗುತ್ತಿದ್ದೆ. ಇನ್ನೇನು ಸ್ವಲ್ಪವೇ ದೂರದಲ್ಲಿತ್ತು ನಾನು ತಲುಪಬೇಕಾಗಿದ್ದ ಸ್ಥಳ. ಇದ್ದಕ್ಕಿದ್ದಂತೆ ಕತ್ತಿನ ಬಳಿ ಏನೋ ಚುಚ್ಚಿದಂತಾಯಿತು. ನಿಧಾನವಾಗಿ ಗಾಡಿ ನಿಲ್ಲಿಸಬೇಕೆಂದು ಬ್ರೇಕ್ ಹಾಕಿದೆ. ತಕ್ಷಣ ರಕ್ತ ರಸ್ತೆಗೆ ಚಿಮ್ಮಿತು. ಬಟ್ಟೆಯ ಮೇಲೆಲ್ಲಾ ರಕ್ತ ಸುರಿಯುತ್ತಿತ್ತು. ಅದನ್ನು ನೋಡಿ ಭಯ ಮತ್ತು ಗಾಬರಿ ಒಟ್ಟಿಗೆ ಆಯಿತು. ಕತ್ತು ಸರಿಯಾಗಿ ನಿಲ್ಲುತ್ತಿಲ್ಲ, ಒಂದು ಕಡೆ ವಾಲುತ್ತಿದೆ. ಅಯ್ಯೋ ಇದೇನಾಯಿತು ಎಂದು ಜೋರಾಗಿ ಕೂಗಿದೆ. ಯಾರು ನನ್ನತ್ತ ನೋಡುತ್ತಿಲ್ಲ. ಏಕೆಂದರೆ ನನ್ನ ಧ್ವನಿ ಹೊರಗೆ ಹೊರಡುತ್ತಲೇ ಇಲ್ಲ. ಗಂಟಲು ಬಿದ್ದು ಹೋಗಿದೆ. ಶಬ್ದ ಅವರಿಗೆ ಕೇಳಿಸುತ್ತಲೇ ಇಲ್ಲ. ತಲೆ ಸುತ್ತಿ ಬಂದಂತಾಯಿತು. ಕಣ್ಣು ಮಂಜಾಯಿತು. ಉಸಿರು ನಿಂತಂತಾಯಿತು. ಕೆಳಕ್ಕೆ ಬೀಳತೊಡಗಿದೆ.

ಈಗ ಜನ ನನ್ನತ್ತ ಬರತೊಡಗಿದರು. ಮನೆಗೆ ವಿಷಯ ತಿಳಿಸಲು ಜೇಬಿನಲ್ಲಿದ್ದ ಮೊಬೈಲ್‌ಗೆ ಕೈ ಹಾಕಿದೆ, ಸಿಗುತ್ತಿಲ್ಲ. ದಿಢೀರನೆ ರಸ್ತೆಯ ಕಲ್ಲಿನ ಮೇಲೆ ಬಿದ್ದೆ. ಮುಂದೇನಾಯಿತೋ ನನಗೆ ಗೊತ್ತಿಲ್ಲ. ಬಹುಶಃ ನಿಮಗೆ ಇಷ್ಟು ಹೊತ್ತಿಗೆ ಗೊತ್ತಾಗಿರಬಹುದು. ನನ್ನ ಪ್ರಾಣಪಕ್ಷಿ ಹಾರಿ ಹೋಗಿರಬಹುದು ಎಂದು ಭಾವಿಸುತ್ತೇನೆ. ಮಾಂಝಾದಾರ ನನ್ನ ಜೀವ ನುಂಗಿತು.

ನಾನು ಶ್ರೀಧರ ನಾಯಕ. ಒಂದು ಅಕ್ಕಿ ಗಿರಣಿಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ 18,000 ರೂಪಾಯಿಯ ಸಂಬಳ. ಒಂದು ಸಣ್ಣ ಬಾಡಿಗೆ ಮನೆಯಲ್ಲಿ ವಾಸ. ಹೆಂಡತಿ ಮತ್ತು ಪಿಯುಸಿ ಓದುತ್ತಿರುವ ನನ್ನ ಮುದ್ದಿನ ಮಗಳೊಂದಿಗೆ ಆರಾಮಾಗಿ ಇದ್ದೆ. ಬದುಕಿನ ಏಳುಬೀಳುಗಳ ನಡುವೆ ಹೇಗೋ ಜೀವನ ಸಾಗುತ್ತಿತ್ತು. ನನ್ನ ಪತ್ನಿಯೂ ಪರಿಸ್ಥಿತಿ ಅರಿತು ಹೊಂದಾಣಿಕೆ ಮಾಡಿಕೊಂಡು ತುಂಬಾ ಒಳ್ಳೆಯ ಜೀವನ ಸಂಗಾತಿಯಾಗಿದ್ದಳು.

ನನ್ನ ಮಗಳು ಈ ಬಾರಿ ವಿಜ್ಞಾನ ವಿಷಯದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದಾಳೆ. ಚಿಕ್ಕ ಮಗುವಾಗಿದ್ದಾಗಿನಿಂದಲೂ ಅತ್ಯಂತ ಬುದ್ಧಿವಂತೆ. ತಾನು ಓದಿದ ಎಲ್ಲಾ ಶಾಲಾ ತರಗತಿಗಳಲ್ಲೂ ಈಕೆಗೇ ಮೊದಲ ಸ್ಥಾನ. ಅವಳಿಗೆ ಡಾಕ್ಟರ್ ಆಗಬೇಕೆಂಬ ಬಹುದೊಡ್ಡ ಕನಸಿದೆ. ನಾವಂತೂ ಕಡುಬಡವರು. ಸರ್ಕಾರಿ ಶಾಲೆಯಲ್ಲಿ ಓದಿ ಮುಂದೆ ಸರ್ಕಾರಿ ಕೋಟಾದಲ್ಲಿಯೇ ಮೆಡಿಕಲ್ ಸೀಟು ಸಿಕ್ಕಿದರೆ ಹೇಗೋ ಬ್ಯಾಂಕಿನ ಹಣಕಾಸು ನೆರವು ಪಡೆದು ಡಾಕ್ಟರ್ ಓದಬೇಕೆಂದು ಆಸೆಪಟ್ಟಿದ್ದಾಳೆ.

ನೀಟ್ ಪರೀಕ್ಷೆಯ ತರಬೇತಿಗಾಗಿ ನಮ್ಮ ಮನೆಯಿಂದ ಐದು ಕಿಲೋಮೀಟರ್ ದೂರದ ತಾಲ್ಲೂಕು ಮುಖ್ಯ ಕೇಂದ್ರದಲ್ಲಿ ಉಚಿತ ತರಬೇತಿ ಪಡೆಯುತ್ತಿದ್ದಾಳೆ. ಇವತ್ತು ಭಾನುವಾರ, ಆ ಉಚಿತ ನೀಟ್ ತರಬೇತಿ ಬೆಳಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ಇತ್ತು. ಆಕೆ ಬೆಳಗ್ಗೆ ನಡೆದೇ ಹೋಗಿದ್ದಳು. ಈಗ ನಾನು ಆಕೆಯನ್ನು ಕರೆದುಕೊಂಡು ಬರಲು ನನ್ನ ಹಳೆಯ ಸ್ಕೂಟರಿನಲ್ಲಿ ಹೋಗುತ್ತಿದ್ದೆ. ಇವತ್ತು ಇನ್ನೊಂದು ವಿಶೇಷವಿದೆ. ಇಂದು ನನ್ನ ಮುದ್ದಿನ ಮಗಳ ಹುಟ್ಟುಹಬ್ಬ.

ಆಕೆ ಸುಮಾರು ಎರಡು ವರ್ಷದಿಂದ ನನ್ನನ್ನು ಒಂದು ಒಳ್ಳೆಯ ಮೊಬೈಲ್‌ಗಾಗಿ ಕಾಡಿ ಬೇಡುತ್ತಿದ್ದಳು. ಬಡವನಾದ ನನಗೆ ಉತ್ತಮ ಗುಣಮಟ್ಟದ ಮೊಬೈಲ್ ಕೊಡಿಸಲು ಸಾಧ್ಯವಾಗಿರಲಿಲ್ಲ. ಆದರೆ ಈಗ ಆಕೆ ಮೆಡಿಕಲ್ ಪ್ರವೇಶ ಪರೀಕ್ಷೆ ಓದಲು ಸಿದ್ಧತೆ ಮಾಡಿಕೊಳ್ಳುತ್ತಿರುವುದರಿಂದ ಒಂದು ಒಳ್ಳೆಯ ಸ್ಮಾರ್ಟ್ ಫೋನ್ ಕೊಡಿಸಬೇಕೆಂದು ಆಗೋ ಹೀಗೋ ಕೂಡಿಟ್ಟ ಹಣವನ್ನು, ಜೊತೆಗೆ ನನ್ನ ಪತ್ನಿಯ ಉಳಿತಾಯದ ಹಣವನ್ನೂ ಎಲ್ಲ ಸೇರಿಸಿ ಸುಮಾರು 20000 ರೂಪಾಯಿ ಬೆಲೆಯ ಮೊಬೈಲ್ ಕೊಡಿಸಲು ನಿರ್ಧರಿಸಿದೆ.

ಅವಳಿಗೆ ಒಂದು ರೀತಿ ಸರ್ಪ್ರೈಸ್ ಇರಲೆಂದು ಮೊದಲೇ ಆಕೆಗೆ ಹೇಳದೆ ಆಕೆಯನ್ನು ಟ್ಯೂಷನ್‌ನಿಂದ ನೇರವಾಗಿ ಮೊಬೈಲ್ ಅಂಗಡಿಗೆ ಕರೆದುಕೊಂಡು ಹೋಗಿ ಕೊಡಿಸುವ ಉತ್ಸಾಹದಲ್ಲಿ ಆ ಕಡೆ ಹೋಗುತ್ತಿದ್ದೆ. ಆದರೆ ದುರಾದೃಷ್ಟ ನನ್ನದೋ, ಮಗಳದೋ, ನನ್ನ ಪತ್ನಿಯದೋ ಅರ್ಥವಾಗುತ್ತಿಲ್ಲ. ನಾನಂತೂ ಈ ಭೂಮಿಯಿಂದ ಹೊರಟೆ. ನನ್ನ ಬರುವಿಕೆಗೆ ಅಲ್ಲಿ ಮಗಳು ಕಾಯುತ್ತಿದ್ದರೆ, ಮನೆಯಲ್ಲಿ ಹೆಂಡತಿ ಕಾಯುತ್ತಿದ್ದಾಳೆ, ನಾನಂತೂ ಬರುವುದಿಲ್ಲ. ನೀವೇ ವಿಷಯ ಮುಟ್ಟಿಸಬೇಕು. ಮುಂದೆ ಏನಾಗುತ್ತೋ ನಿಮಗೆ ಅರ್ಥವಾಗಬಹುದು.

ಗಾಳಿಪಟ ಹಾರಿಸುವುದು ಒಂದು ಗ್ರಾಮೀಣ ಸಾಂಸ್ಕೃತಿಕ ಆಟ. ಈ ಆಟ ಈ ವರ್ಷ ನಮ್ಮ ದೇಶದಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಜನರನ್ನು ಬಲಿ ಪಡೆದರೆ, ಮತ್ತೆ ಕೆಲವರು ತೀವ್ರ ಸ್ವರೂಪದ ಗಾಯಾಳುಗಳಾಗಿದ್ದಾರೆ. ದೇಶದ ಜನಸಂಖ್ಯೆಗೆ ಹೋಲಿಸಿದರೆ ಈ ಸಾವುಗಳು ಕಡಿಮೆಯೇ ಇರಬಹುದು. ಆದರೆ ಈ ಸಾವುಗಳು ಮಾತ್ರ ತೀರಾ ಅನಾವಶ್ಯಕ, ಬೇಜವಾಬ್ದಾರಿ ನಡೆಯಿಂದ ಆಗುತ್ತಿದೆ ಮತ್ತು ಇದನ್ನು ನಿರ್ಲಕ್ಷಿಸಿದರೆ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಹೆಚ್ಚಾಗಬಹುದು.

ಸರ್ಕಾರಗಳು ಕೂಡಲೇ ಎಚ್ಚೆತ್ತುಕೊಂಡು ಗಾಳಿಪಟ ಹಾರಿಸುವಾಗ ಈ ಆಟಕ್ಕೆ ನೀತಿ ನಿಯಮಗಳನ್ನು ರೂಪಿಸಲೇಬೇಕಿದೆ. ಮುಖ್ಯವಾಗಿ ಒಂದು ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ಮಾತ್ರ ಗಾಳಿಪಟ ಹಾರಿಸುವಂತಿರಬೇಕು. ಹೆಚ್ಚಾಗಿ ಬಯಲು ಪ್ರದೇಶದಲ್ಲಿಯೇ ಗಾಳಿಪಟ ಹಾರಿಸಬೇಕು. ಜನವಸತಿ ಪ್ರದೇಶದಲ್ಲಿ, ರಸ್ತೆ ಬದಿಯಲ್ಲಿ ಅದನ್ನು ಸಂಪೂರ್ಣ ನಿಷೇಧಿಸಬೇಕು. ಮನೆಯ ಮಹಡಿಯ ಮೇಲೆಯೂ ಹಾರಿಸಬಾರದು.

ಅದಕ್ಕೆ ಉಪಯೋಗಿಸುವ ದಾರವನ್ನು, ಅದರ ಗುಣಮಟ್ಟವನ್ನು ಅಪಾಯಕಾರಿ ಇಲ್ಲದಂತೆ ನೋಡಿಕೊಳ್ಳಬೇಕು. ವರ್ಷದ ಎಲ್ಲಾ ಕಾಲವೂ ಹಾರಿಸಲು ನಿಷೇಧ ಸೇರಿ ಕೆಲುವು ಸಂದರ್ಭದಲ್ಲಿ ಮಾತ್ರ ಅನುಮತಿ ನೀಡಬೇಕು. ವಿದ್ಯುತ್ ಕಂಬಗಳ ಬಳಿ, ಜನನಿಬಿಡ ಪ್ರದೇಶದಲ್ಲಿ ಸಂಪೂರ್ಣ ನಿಷೇಧ ಇರಬೇಕು. ಗಾಳಿಪಟಗಳ ಗುಣಮಟ್ಟವನ್ನೂ ಪರೀಕ್ಷಿಸಬೇಕು. ಚಿಕ್ಕ ಮಕ್ಕಳಿಗೆ ಅನುಮತಿ ನೀಡಲೇಬಾರದು.

ಗಾಳಿಪಟ ಸ್ಪರ್ಧೆ ಅಥವಾ ಗುಂಪು ಹಾರಿಸುವಿಕೆಯಲ್ಲಿ ಪೊಲೀಸರ ಅನುಮತಿ ಪಡೆಯಲೇಬೇಕು. ಮಧ್ಯದಲ್ಲಿಯೇ ತುಂಡಾದ ಅಥವಾ ಹರಿದ ಗಾಳಿಪಟವನ್ನು ಸಂಗ್ರಹಿಸಿ ಅದನ್ನು ನಾಶಪಡಿಸಬೇಕು.

ರಸ್ತೆ ಬದಿ ಯಾವುದೇ ಕಾರಣಕ್ಕೂ ಗಾಳಿಪಟ ಹಾರಿಸುವಂತಿಲ್ಲ. ಇದಲ್ಲದೆ ಇನ್ನೂ ಪರಿಣಿತರೊಂದಿಗೆ ಚರ್ಚಿಸಿ ಗಾಳಿಪಟದಿಂದ ಆಗುತ್ತಿರುವ ಅಥವಾ ಮಂಜಾದಾರದಿಂದ ಆಗುತ್ತಿರುವ ಅನಾಹುತಗಳನ್ನು ತಪ್ಪಿಸಬೇಕು. ಇಲ್ಲದಿದ್ದರೆ ತುಂಬಾ ಅನಾಹುತವಾಗಬಹುದು. ದಯವಿಟ್ಟು ಈ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಬಲಗೊಳ್ಳುವಂತೆ ಮತ್ತು ಸರ್ಕಾರದ ಗಮನ ಸೆಳೆಯುವಂತೆ ಜಾಗೃತಿ ಮೂಡಿಸೋಣ. ಮೃತ ಶ್ರೀ ಶ್ರೀಧರ ನಾಯಕ ಅವರಿಗೆ ಹೃದಯ ಪೂರ್ವಕ ಶ್ರದ್ಧಾಂಜಲಿ.

– ವಿವೇಕಾನಂದ. ಎಚ್. ಕೆ., ಬೆಂಗಳೂರು

ಕುರ್ಚಿಯು ಹೋಗಿ ಮುಟ್ಟಬೇಕಾದ ಜಾಗವಾಗಿದ್ದು ಹೇಗೆ?

■ **ನೆಲದ ಮೇಲೆ ಕೂರುವುದಕ್ಕಿಂತ ಈ ರೀತಿ ಕಲ್ಲಿನ ಮೇಲೆ ಸ್ವಲ್ಪ ಎತ್ತರಕ್ಕೆ ಕೂರುವುದು ಹೆಚ್ಚು ಅನುಕೂಲ. ಅಷ್ಟರಲ್ಲಿ ಅವನು ಹಾಗೆ ಕೂತದ್ದನ್ನು ಇನ್ನೊಬ್ಬ ಕಂಡ. ಕುಳಿತುಕೊಳ್ಳಲು ಒಳ್ಳೆಯ ಉಪಾಯ.. ಎರಡನೆಯವನು ಗುಡಿಸಿಲಿನೊಳಗೆ ಚಪ್ಪಡಿ ಕಂದನ್ನು ತಂದಿಟ್ಟುಕೊಂಡ. ಮೂರನೆಯವನು ಅದರ ಬೆನ್ನಿಗೆ ಆನಿಸಿಕೊಳ್ಳಲು ಇನ್ನೊಂದು ಕಲ್ಲನ್ನು ಸರಿಸಿಟ್ಟ. ಇನ್ನೊಬ್ಬ ಅದನ್ನೇ ಸ್ವಲ್ಪ ಎತ್ತರಕ್ಕೆ ಇರಿಸಿದ. ಹೀಗೆ- ಹೇಗೋ ಗೊತ್ತಿಲ್ಲ, ಕುರ್ಚಿಯೆಂಬ ಕುರ್ಚಿಯ ರೂಪಾಂತರಗಳ ಆವಿಷ್ಕಾರವಾಯಿತು!!**

ನಾವು ತೀರಾ ಆದಿಮಾನವನ ಗುಂಪಿನ ಬದುಕಿನ ವಿವರ, ಇತಿಹಾಸ ನೋಡಿದರೆ ಕುರ್ಚಿ ಇಂದಿನಂತೆ ಎಲ್ಲರ ಪೀಠೋಪಕರಣವಾಗುವುದಕ್ಕಿಂತ ಮೊದಲೇ ಗದ್ದುಗೆ, ಸಿಂಹಾಸನವಾಗಿತ್ತು ಎನ್ನುವುದು ತಿಳಿಯುತ್ತದೆ. ಮೇಲೆ ಕೂರುವವರು ಮುಖಂಡ, ಹಿರಿಯ, ರಾಜ, ಪಾರೋ ಇತ್ಯಾದಿ. ಉಳಿದವರೆಲ್ಲ ನೆಲದ ಮೇಲೆಯೇ ಕೂರುತ್ತಿದ್ದರಲ್ಲವೇ. ಅಲ್ಲಿಂದ ಮುಂದೆ ಯಾರು ಎತ್ತರದಲ್ಲಿ ಕೂರುತ್ತಾರೋ ಅವರ ಮಾನ-ಮರ್ಯಾದೆ ಜಾಸ್ತಿ ಎಂದಾಯಿತು. ಯೋಗ್ಯತಾನುಸಾರ ಕುರ್ಚಿ.

ಅವನಿಗೆ ಸುಸ್ತಾಗಿತ್ತು ಅಷ್ಟೇ. ಅವನೇನು ಜಗತ್ತನ್ನು ಬದಲಿಸಿ ಬಿಡುತ್ತೇನೆ ಎಂದು ಹೊರಟವನಲ್ಲ, ಅವನೊಬ್ಬ ಸಾಮಾನ್ಯ. ಕಾಲ್ನಡಿಗೆ ಅಂದುಕೊಂಡದ್ದಕ್ಕಿಂತ ದೀರ್ಘವಾಗಿತ್ತು, ಹಾಗಾಗಿ ದಣಿವಾಗಿತ್ತು. ಮೊಣಕಾಲು ಸೋತುಹೋಗಿತ್ತು. ಇನ್ನು ನಡೆಯಲು ಸಾಧ್ಯವೇ ಇಲ್ಲ ಎನ್ನುವಾಗ ಅಲ್ಲಿಯೇ, ಪಕ್ಕದಂದು ಚಿಕ್ಕ ಸಪಾಟು ಬಂಡೆಗಲ್ಲು. ಆ ಕಲ್ಲಿನ ಮೇಲಿನ ಧೂಳು, ಕಸಗಳನ್ನು ಸರಿಸಿ ಕುಳಿತುಕೊಂಡ. ಕಾಲು ನೀಡಿಸಿದ. ಅದೆಷ್ಟು ಆರಾಮ!

ನೆಲದ ಮೇಲೆ ಕೂರುವುದಕ್ಕಿಂತ ಈ ರೀತಿ ಕಲ್ಲಿನ ಮೇಲೆ ಸ್ವಲ್ಪ ಎತ್ತರಕ್ಕೆ ಕೂರುವುದು ಹೆಚ್ಚು ಅನುಕೂಲ. ಅಷ್ಟರಲ್ಲಿ ಅವನು ಹಾಗೆ ಕೂತದ್ದನ್ನು ಇನ್ನೊಬ್ಬ ಕಂಡ. ಕುಳಿತುಕೊಳ್ಳಲು ಒಳ್ಳೆಯ ಉಪಾಯ.. ಎರಡನೆಯವನು ಗುಡಿಸಿಲಿನೊಳಗೆ ಚಪ್ಪಡಿ ಕಂದನ್ನು ತಂದಿಟ್ಟುಕೊಂಡ. ಮೂರನೆಯವನು ಅದರ ಬೆನ್ನಿಗೆ ಆನಿಸಿಕೊಳ್ಳಲು ಇನ್ನೊಂದು ಕಲ್ಲನ್ನು ಸರಿಸಿಟ್ಟ. ಇನ್ನೊಬ್ಬ ಅದನ್ನೇ ಸ್ವಲ್ಪ ಎತ್ತರಕ್ಕೆ ಇರಿಸಿದ. ಹೀಗೆ- ಹೇಗೋ ಗೊತ್ತಿಲ್ಲ, ಕುರ್ಚಿಯೆಂಬ ಕುರ್ಚಿಯ ರೂಪಾಂತರಗಳ ಆವಿಷ್ಕಾರವಾಯಿತು!!

ನಾವು ತೀರಾ ಆದಿಮಾನವನ ಗುಂಪಿನ ಬದುಕಿನ ವಿವರ, ಇತಿಹಾಸ ನೋಡಿದರೆ ಕುರ್ಚಿ ಇಂದಿನಂತೆ ಎಲ್ಲರ ಪೀಠೋಪಕರಣವಾಗುವುದಕ್ಕಿಂತ ಮೊದಲೇ ಗದ್ದುಗೆ, ಸಿಂಹಾಸನವಾಗಿತ್ತು ಎನ್ನುವುದು ತಿಳಿಯುತ್ತದೆ. ಮೇಲೆ ಕೂರುವವರು ಮುಖಂಡ, ಹಿರಿಯ, ರಾಜ, ಪಾರೋ ಇತ್ಯಾದಿ.

ಉಳಿದವರೆಲ್ಲ ನೆಲದ ಮೇಲೆಯೇ ಕೂರುತ್ತಿದ್ದರಲ್ಲವೇ. ಅಲ್ಲಿಂದ ಮುಂದೆ ಯಾರು ಎತ್ತರದಲ್ಲಿ ಕೂರುತ್ತಾರೋ ಅವರ ಮಾನ-ಮರ್ಯಾದೆ ಜಾಸ್ತಿ ಎಂದಾಯಿತು. ಯೋಗ್ಯತಾನುಸಾರ ಕುರ್ಚಿ. ಮನೆಯಲ್ಲಿ, ಕಚೇರಿಗಳಲ್ಲಿ, ಕಾರ್ಯಕ್ರಮಗಳಲ್ಲಿ- ವೇದಿಕೆಯ ಮೇಲೆ, ವೇದಿಕೆಯ ಮುಂದೆ- ಕೆಳಗೆ. ಹೆಚ್ಚಿನ ಯೋಗ್ಯತೆಯ ಅತಿಥಿಗಳಿಗೆ ಸೋಫಾ. ಅಗಲದ ಕುರ್ಚಿಯ ಬಿಸಿನೆಸ್ ಕ್ಲಾಸಿನ ವಿಮಾನದ ಪ್ರಯಾಣಕ್ಕೆ ಮೂರ್ನಾಲ್ಕು ಪಟ್ಟು ಹಣ.

ಮುಖ್ಯಮಂತ್ರಿಯ ಕುರ್ಚಿ, ಹೆಡ್‌ಮಾಸ್ತರ್ ಕುರ್ಚಿ, ಬಸ್ ಕಂಡಕ್ಟರಿನ ಚಿಕ್ಕ ಟ್ರಂಕ್- ಅದರ ಮೇಲೆ ತೆಳ್ಳಗಿನ ದಿಂಬು- ಸೀಟು, ಆಸ್ಪತ್ರೆಯ ಕಾರಿಡಾರಿನ ಕುರ್ಚಿ, ನ್ಯಾಯಾಧೀಶರ, ಸ್ವಾಮೀಜಿಗಳ ಪೀಠ, ಆರಾಮಕುರ್ಚಿ, ಸೆಕ್ಯುರಿಟಿ ಗಾರ್ಡಿನ ನೀಲ್‌ಕಮಲ್ ಕುರ್ಚಿ, ಯಕ್ಷಗಾನ ನಾಟಕ ಕಂಪನಿಗಳ ಕುರ್ಚಿ- ಎಲ್ಲಾ ಕುರ್ಚಿಗಳಿಗೂ ಅವುಗಳದ್ದೇ ಆದ ಜೀವವಿದೆ, ಬೆಲೆಯಿದೆ, ಶ್ರೇಣಿಯಿದೆ.

ಸಿನಿಮಾ, ಕಾರ್ಯಕ್ರಮ, ಹೋಟೆಲ್ಲು, ಸ್ಟೇಡಿಯಂ, ಥಿಯೇಟರ್, ರೈಲು, ಬದುಕು ಎಡೆಯೂ ನಾವು ಒಳ್ಳೆಯ ಕುರ್ಚಿ ಬಯಸುತ್ತೇವೆ, ಹುಡುಕುತ್ತೇವೆ. ಸನ್ಯಾಸ ಪಡೆದ ಸ್ವಾಮೀಜಿಗಳ ಮಧ್ಯೆ ಯಾರ ಪೀಠ ಎತ್ತರಕ್ಕಿಡಬೇಕು ಎಂಬ ವಿಷಯದಲ್ಲಿ ಮನಸ್ತಾಪ-ಜಗಳವಾಗುತ್ತವೆ, ಶತಮಾನಗಳ ಕಾಲ ವೈಮನಸ್ಸು ಮುಂದುವರಿಯುತ್ತದೆ. ಇಷ್ಟಾಗಿ ಈಗ ಮನುಕುಲಕ್ಕೆ ಕುರ್ಚಿಯದೇ ಸಮಸ್ಯೆ, ಶಾಪ!

ಇಂದಿನ ವಿಜ್ಞಾನಿಗಳು, ನರ ಮೂಳೆ ತಜ್ಞರು ಹೇಳುವುದು Sitting is new smoking. ಅವರ ಪ್ರಕಾರ ಇಡೀ ದಿನ ಕುಳಿತುಕೊಳ್ಳುವುದು ದಿನಕ್ಕೆ ನಾಲ್ಕು ಬೀಡಿ-ಸಿಗರೇಟು ಸೇದಿದ್ದಕ್ಕೆ ಸಮಾನವಂತೆ! ಸೌಕರ್ಯಕ್ಕೆ ಹುಟ್ಟಿದ ಕುರ್ಚಿ ಮೊದಲಿನಿಂದಲೂ ಅಧಿಕಾರ, ಘನತೆಯ ವಿಷಯವಾಗಿ ಅನಾದಿ ಕಾಲದಿಂದ ಮುಂದುವರಿದು ಬಂದಿರುವುದು ವಿಚಿತ್ರವಂತೂ ಹೌದಲ್ಲವೇ? ಪತಂಜಲಿಯು ಸ್ಥಿರಂ ಸುಖಂ ಆಸನಂ ಎಂದು ಸುಮ್ಮನಾದ. ಆದರೆ ಅಲ್ಲಿಂದಿಲ್ಲಿಯವರೆಗೂ ಕುರ್ಚಿ ಸ್ಥಿರವೂ ಅಲ್ಲ, ಶಾಶ್ವತದ ವಿಷಯವೂ ಅಲ್ಲ, ಸುಖದ ವಿಷಯವೂ ಅಲ್ಲ.

ಕುರ್ಚಿ ಒಂದು destinationಗೆ ಹೋಗಿ ಮುಟ್ಟಬೇಕಾದ ಜಾಗ, ಸ್ಥಾನ. ಕುರ್ಚಿಯು ಕೂತವನನ್ನೇ ಬದಲಿಸಿಬಿಡುತ್ತದೆ! ಒಮ್ಮೆ ಸ್ವಲ್ಪ ನಿಧಾನಿಸಿ ಯೋಚಿಸಿ ನೋಡಿ. ಅನುಕೂಲಕ್ಕೆ, ಸೌಲಭ್ಯಕ್ಕೆ ಹುಟ್ಟಿದ ಮುಗ್ಧವೆನಿಸುವ ವಸ್ತುಗಳು ಹೀಗೆ ನಮ್ಮನ್ನು ಚಿತ್ರ ವಿಚಿತ್ರವಾಗಿ ಆವರಿಸಿಕೊಂಡು ಬಿಡುತ್ತವೆ ಅಲ್ಲವೇ? ಸಮಯ- ಟೈಮ್ ಕೂಡ ಹಾಗೆಯೇ.

ಮನುಷ್ಯನ- ಹೋಮೋ ಸೇಪಿಯನ್ನಿನ ಪೂರ್ಣ ಇತಿಹಾಸ ತೆಗೆದುಕೊಂಡರೆ ಅದರ ಬಹುತೇಕ ಭಾಗ ಯಾರೂ ಟೈಮ್ ಎಷ್ಟಾಯ್ತು? ಎಂದು ಕೇಳಿಯೇ ಇಲ್ಲ. ಅವರಿಗೆಲ್ಲರಿಗೂ ಸಮಯ ಎಷ್ಟು ಎನ್ನುವುದೇ ಅರ್ಥವಿಲ್ಲದ ಪ್ರಶ್ನೆಯಾಗಿತ್ತು. ಬೆಳಕಾದಾಗ ಏಳುತ್ತಿದ್ದರು, ಹಸಿವಾದಾಗ ತಿನ್ನುತ್ತಿದ್ದರು, ಸುಸ್ತಾದಾಗ ಕೆಲಸ ನಿಲ್ಲಿಸುತ್ತಿದ್ದರು, ಕತ್ತಲಾದಾಗ ಮಲಗುತ್ತಿದ್ದರು.

ಸಿಂಪಲ್. ಈ ರೀತಿ- ಬೆಳಕಿಗೆ ತಕ್ಕಂತೆ ಇದ್ದ ಮನುಷ್ಯನ ಬದುಕಿನಲ್ಲಿ ಅದ್ಯಾವುದೋ ಒಂದು ದಿನ, ಗಳಿಗೆ- ಯಾರೋ ಒಬ್ಬ ಪುಣ್ಯಾತ್ಮನಿಗೆ ದಿನವನ್ನು ತುಂಡುತುಂಡಾಗಿ ನೋಡುವ ಕಲ್ಪನೆಯೊಂದು ಹುಟ್ಟಿಕೊಂಡಿತು.

ಬಹುಶಃ ಸಂಘಜೀವನದಲ್ಲಿ ಬದುಕಿನಲ್ಲಿ ಕೆಲಸಗಳ ಸಮನ್ವಯಕ್ಕೆ(coordination) ಅವಶ್ಯಕತೆಯೆನಿಸಿರಬೇಕು. ಬೆಳಗ್ಗೆ ಬರುತ್ತೇನೆ, ಮಧ್ಯಾಹ್ನ ಕೊಡುತ್ತೇನೆ ಎಂಬಿತ್ಯಾದಿ ವ್ಯವಹಾರಕ್ಕೆ ಶುರುವಾಗಿದ್ದಿರಬೇಕು. ಈಗ? ಸಮನ್ವಯಕ್ಕಿದ್ದ ಸಮಯ ಈಗ ಇಡೀ ಮನುಷ್ಯಕುಲವನ್ನೇ ನಿಯಂತ್ರಿಸುತ್ತದೆ.

ದಿನನಿತ್ಯದ ಬಹುಪಾಲು ಕೆಲಸವನ್ನು ಯಾವಾಗ ಆರಂಭಿಸಬೇಕು, ಯಾವಾಗ ಮುಗಿಸಬೇಕು ಎಂದು ನಿರ್ಧರಿಸುವುದು ನಾವಲ್ಲ- ಗಡಿಯಾರ! ಆದರೆ ಇವತ್ತಿಗೂ ಹಳ್ಳಿಗಳಲ್ಲಿ ಹೆಚ್ಚಿನ ಮಾತುಕತೆಗಳು ಯಾಮ-ಜಾವದ ಲೆಕ್ಕದಲ್ಲಿಯೇ ಇರುತ್ತವೆ. ಆದರೆ ಹಳ್ಳಿಯಿಂದ ಪೇಟೆಗೆ, ಪೇಟೆಯಿಂದ ಮಹಾ ನಗರಕ್ಕೆ ಹೀಗೆ ಆಧುನಿಕತೆಯ ಮೇಲುಸ್ತರಕ್ಕೆ ಏರಿದಂತೆಲ್ಲ, ಮನುಷ್ಯನ ಬದುಕಿನ ಮೇಲಿನ ಸಮಯದ ಹಿಡಿತ ಬಿಗುವಾಗುತ್ತಾ ಹೋಗುತ್ತದೆ.



ಯಾಮದ ಲೆಕ್ಕದ ನಮ್ಮೂರಿಗೆ ಸರಕಾರಿ ಬಸ್ಸು, ಗಂಟೆಗಳ ಲೆಕ್ಕದ ನಿಖರತೆಯಲ್ಲಿ ಬಂದು ಹೋಗುತ್ತದೆ. ಅತ್ತ ಜಪಾನಿನಲ್ಲಿ ರೈಲು ಸೆಕೆಂಡುಗಳ ನಿಖರತೆಯಲ್ಲಿ ಚಲಿಸುತ್ತದೆ. ಅದರರ್ಥ ರೈಲಿನಲ್ಲಿ ಹೋಗುವ ಪ್ರಯಾಣಿಕರಿಂದ ಹಿಡಿದು ಆ ಇಡೀ ವ್ಯವಸ್ಥೆ ಸೆಕೆಂಡುಗಳ ನಿಖರತೆಗೆ ಹೊಂದಿಕೊಳ್ಳಬೇಕಾಯ್ತು.

ಸಮಯಕ್ಕೆ ತಕ್ಕಂತೆ ನಡೆದುಕೊಳ್ಳದಿದ್ದರೆ ಟೈಮ್ ಸೆನ್ಸ್? ಇಲ್ಲವೇ ಎಂದು ಕೇಳುತ್ತೇವೆ. ಸೆನ್ಸ್- ಸಮಯ ಒಂದು ಭಾವ! ನಾವೆಲ್ಲರೂ ಸಮಯವನ್ನು ನಿರಂತರ ಭಾವನಾತ್ಮಕವಾಗಿ ಅನುಭವಿಸುತ್ತಿರುತ್ತೇವೆ. ಎಷ್ಟು ಹೊತ್ತಿಗೂ ಸಮಯದ ಪರಿವೆಯನ್ನಿಟ್ಟೇ ಬದುಕುತ್ತೇವೆಯಲ್ಲ, ಸಮಯ ನೋಡಿದಾಗಲೆಲ್ಲ ಒಂದೋ ಇನ್ನಷ್ಟು ಸಮಯವಿದೆ ಎಂದೆನಿಸುತ್ತದೆ, ಇಲ್ಲವೇ ತಡವಾಯ್ತು ಎಂದೆನಿಸುತ್ತದೆ.

ಕೈಗಾರಿಕೆ ಬೆಳೆದಂತೆ ಶಿಫ್ಟ್-, ಡೆಡ್‌ಲೈನ್, ಉತ್ಪಾದಕತೆ ಏನೇನೋ ಬೆಳೆದು, ಬದಲಾಗಿ ಈಗ ಸಮಯವನ್ನು ಉಳಿತಾಯ ಮಾಡಬೇಕು. ಸದ್ಬಳಕೆ ಮಾಡಬೇಕು ಎನ್ನುವಲ್ಲಿಗೆ ಬಂದು ಮುಟ್ಟಿದ್ದೇವೆ. ಅನಂತ ಅಂಬಾನಿಯ ದುಬಾರಿ ಕೋಟಿ ಬೆಲೆಯ ವಾಚಿಗೆ ಉಸೇನ್ ಬೋಲ್ಟನ ಓಟದ ವೇಗ ಅಳೆಯಲಿಕ್ಕಾಗುವುದಿಲ್ಲ.

ಸಮಯ- ಗಡಿಯಾರ ಇವತ್ತು ಪ್ರತಿಯೊಬ್ಬನನ್ನೂ ಅಳೆಯುತ್ತದೆ. ಅಂಥ ಟೈಮ್- ಸಮಯ ವಿಜ್ಞಾನಿಗಳ ಪ್ರಕಾರ ನಾವಂದುಕೊಂಡಷ್ಟು ಪಾಪದ್ದಲ್ಲ. ಸಮಯ ಕೆಲವು ವಿಶೇಷ ಸ್ಥಿತಿಗಳಲ್ಲಿ ಬಾಗುತ್ತದೆ, ಹಿಗ್ಗುತ್ತದೆ. ಐನ್‌ಸ್ಟೀನ್ ಪ್ರಕಾರ ಬೆಳಕಿನಷ್ಟು ವೇಗದಲ್ಲಿ ಪ್ರಯಾಣಿಸಿದರೆ ಪ್ರಯಾಣಿಕನ ಸಮಯ ನಿಧಾನವಾಗುತ್ತದೆ.

ಬ್ಲಾಕ್ ಹೋಲ್- ಕಪ್ಪು ರಂಧ್ರದ ಹೊರಮೈ ಪ್ರವೇಶಿಸುತ್ತಿದ್ದಂತೆ ಸಮಯವೇ ನಿಂತುಹೋಗುತ್ತದೆ! ಇದೆಲ್ಲದರ ನಡುವೆ ಅಮೆರಿಕ ಮೊದಲಾದ ದೇಶಗಳಲ್ಲಿ ವರ್ಷಕ್ಕೆರಡು ಬಾರಿ ಸಮಯವನ್ನೇ ಒಂದೆರಡು ತಾಸು ಹಿಂದೆ ಮುಂದೆ ಮಾಡುವ ಪದ್ಧತಿಯಿದೆ!!

ಟೈಮ್ ನೋಡಿ, ಸಮಯದ ಪ್ರಕಾರ ಬದುಕಬೇಕು ಎನ್ನುತ್ತಾರೆ. ಆದರೆ ಕೈಗಡಿಯಾರದ ಪ್ರಕಾರ ನಡೆದುಕೊಳ್ಳಬಾರದು ಎನ್ನುವವರೂ ಇದ್ದಾರೆ. ನೀವು ತೂಕ ಇಳಿಸಬೇಕು, ಆರೋಗ್ಯ ಸರಿಮಾಡಿ ಕೊಳ್ಳಬೇಕು, ಸರಿಯಿಟ್ಟುಕೊಳ್ಳಬೇಕು ಎಂದು ಡಯೆಟಿಷಿಯನ್ ಬಳಿ ಹೋಗಿ- ಅವರು ಹೇಳುವುದು ಸೂರ್ಯಾಸ್ತಕ್ಕಿಂತ ಮೊದಲು ತಿನ್ನಬೇಕು, ಹಸಿವೆಯಾದಾಗಷ್ಟೇ ತಿನ್ನಬೇಕು, ನಡುನಡುವೆ ಒಂದಿಷ್ಟು ಹೊತ್ತು, ದೇಹಕ್ಕೆ ಆಹಾರ ಕೊಡದೆ ಕೃತಕವಾಗಿ ಉಪವಾಸ ಬೀಳಿಸಬೇಕು.

ಇನ್ನು ಮಾನಸಿಕ, ನರತಜ್ಞರು ಕತ್ತಲಾದಮೇಲೆ ಬೆಳಕು ಕಡಿಮೆ ನೋಡಬೇಕು, ಮಲಗುವುದಕ್ಕಿಂತ ಮೊದಲು ಮೊಬೈಲ್ ನೋಡಬಾರದು, ನೀಲಿಬೆಳಕು ನೋಡಬಾರದು, ವಿದ್ಯುತ್ ದೀಪ ನಿದ್ರೆಗೆ ಒಳ್ಳೆಯದಲ್ಲ. ಬೆಳಗಿನ ಜಾವ, ಸಂಜೆ ಸೂರ್ಯನ ಬೆಳಕು ಒಂದರ್ಧ ಗಂಟೆ ನೋಡಬೇಕು, ನೋಡಿದರೆ ಸೆರೆಟೋನಿನ್ ಇತ್ಯಾದಿ ಸರಿಯಾಗಿ ಬಿಡುಗಡೆಯಾಗುತ್ತದೆ.

ಆಗ ನಿದ್ರೆ ಪರಿಪೂರ್ಣವಾಗುತ್ತದೆ. ಇಂದಿನ ವಿನ ಕಾಡಿನಲ್ಲಿ ಆದಿ ಮಾನವನಂತೆ ಬದುಕುವುದೇ ಅತ್ಯಂತ ಆರೋಗ್ಯಕರ ಎಂದು ಹೇಳುವುದೊಂದು ಬಾಕಿಯಿದೆ. ಇರಲಿ, ಅಲ್ಲಿಗೆ ಸಮಯ- ಟೈಮ್ ಅನ್ನು ನಾವು ಕಂಡುಹಿಡಿದು ಶತಮಾನಗಳೇ ಕಳೆದಿದ್ದರೂ ನಮ್ಮ ದೇಹ ಮಾತ್ರ ಸೂರ್ಯನ ಬೆಳಕಿನ ಲೆಕ್ಕದಲ್ಲಿ ತನ್ನೊಳಗೆ ಬೇರೆಯದೇ ಗಡಿಯಾರ- ಟೈಮ್ ಇಟ್ಟುಕೊಂಡಿದೆ, ಅದರಂತೆ ದೇಹವನ್ನು ನಿರ್ವಹಿಸುತ್ತದೆ.

ಈ ಮನುಷ್ಯಕೃತ ಗಡಿಯಾರದ ಸಮಯ ಮತ್ತು ದೇಹದ ಅಂತರ್ ಸಮಯ circadian rhythm ಸ್ವಲ್ಪವೇ ವ್ಯತ್ಯಾಸವಾದಾಗ ನೇರ ಅಡ್ಡಪರಿಣಾಮ. ನನಗೆ ಎಲ್ಲಿಲ್ಲದಷ್ಟು ವಿಚಿತ್ರವೆನಿಸುವ ಇನ್ನೊಂದು- ಬೂಟು, ಷೂ, ಚಪ್ಪಲಿಗಳದ್ದು. ಯಾವುದೋ ಒಂದು ಕಾಲದಲ್ಲಿ ಕಲ್ಲು ಮುಳ್ಳುಗಳಿಂದ, ಹಾವು ಹರಣೆಗಳಿಂದ, ಚಳಿ, ಸುಡುವ ಬಿಸಿಲು- ಒಟ್ಟಾರೆ ಕಾಲಿನ ರಕ್ಷಣೆಗೆ ಆವಿಷ್ಕಾರವಾಗಿದ್ದು ಪಾದರಕ್ಷೆ.

ಎಷ್ಟು ಮಹತ್ವದ ಆವಿಷ್ಕಾರ ಯೋಚಿಸಿ. ಚಪ್ಪಲಿ ಮನುಷ್ಯನಿಗೆ ಚಲನೆ ಕೊಟ್ಟಿತು. ಖಂಡಾಂತರ ನಡೆದು ವಲಸೆ ಹೋಗುವಷ್ಟು ಶಕ್ತಿ ತುಂಬಿಬಿಟ್ಟಿತು. ಈಗ ಬರಿಕಾಲಲ್ಲಿ ನಾಲ್ಕು ಹೆಜ್ಜೆ ಮಣ್ಣು ದಾರಿಯಲ್ಲಿ ನಡೆದು ನೋಡಿ. ಅಭ್ಯಾಸವಿದ್ದರೆ ಸರಿ- ನೀವು ಪೇಟೆಜೀವಿಯಾಗಿದ್ದಲ್ಲಿ ಕುಂಟುತ್ತ ಹಾರುತ್ತ ಆರು ಹೆಜ್ಜೆ ದಾಟಲಿಕ್ಕಾಗುವುದಿಲ್ಲ. ಆದರೆ ಈಗ ಪಾದರಕ್ಷೆ ರಕ್ಷಣೆಯ ವಿಷಯವಾಗಿಯೇ ಉಳಿದಿಲ್ಲ.

ಚಪ್ಪಲಿಗೊಂದು ಜಾಗವಿದೆ ಎನ್ನುತ್ತೇವೆ. ಆದರೆ ಚಪ್ಪಲಿಗಳ ನಡುವೆಯೇ ಅವುಗಳಿಗೆ ಪ್ರತ್ಯೇಕ ಜಾಗಗಳಿವೆ. ಪ್ಯಾರಗಾನ್, ಬಾಟಾ, ನೈಕಿ, ಆದಿದಾಸ್, ಸ್ಕೆಚರ್, ಗುಚ್ಚಿ, ಪ್ರಡಾ, ಬೆಲೆನ್ಸಿಯಾಗ. ಸರಿಯೋ ತಪ್ಪೋ, ಪಾದರಕ್ಷೆ ನೋಡಿ ವ್ಯಕ್ತಿಯನ್ನು ಅಳೆಯುವುದು ಅತ್ಯಂತ ಸಹಜ ಮತ್ತು ಸಾಮಾನ್ಯ ಮನುಷ್ಯ ಗುಣ. ಯಾಕೋ ಗೊತ್ತಿಲ್ಲ. ನನಗೆ ಬಹಳ ವಿಚಿತ್ರವೆನಿಸುವ ಇನ್ನೊಂದು ವಿಷಯ ಬ್ಯಾಗ್- ಚೀಲ ಬೆಳೆದು ಬಂದ ರೀತಿ. ಅನಾದಿ ಕಾಲದಲ್ಲಿ, ಯಾವುದೋ ಪುಣ್ಯಾತ್ಮನಿಗೆ ವಸ್ತುಗಳನ್ನು ಒಯ್ಯಲು ಚೀಲ ಅವಶ್ಯಕತೆಯೆನಿಸಿತು.

ಚೀಲ, ಪಾದರಕ್ಷೆ ಇವೆಲ್ಲ ಯಾವುದೋ ಒಂದು ದಿನ ಆವಿಷ್ಕಾರವಾದ ವಸ್ತುಗಳಲ್ಲ ಎನ್ನುವುದು ಗೊತ್ತು. ಅವು ನಿಧಾನಕ್ಕೆ ಬದಲಾವಣೆಗೊಳ್ಳುತ್ತ ರೂಪ ಪಡೆದವು. ಮೊದಲು ಬೊಗಸೆಗೆ ಎಲೆಯ ಬಳಕೆ, ನಂತರ ಚರ್ಮದ, ಹುಲ್ಲಿನ ಚೀಲ, ಬಟ್ಟೆಯ ಚೀಲ, ಕೈಚೀಲ ಇತ್ಯಾದಿ. ಇತ್ತೀಚೆಗೆ ಶಿಕಾಗೋ ನಗರದಲ್ಲಿರುವ ಲೂಯಿ ವಿಟ್ಟೋನ್ ಅಂಗಡಿಗೆ ಹೋಗಿದ್ದೆ.

ಅಲ್ಲಿ ಮಹಿಳೆಯರ ಹ್ಯಾಂಡ್‌ಬ್ಯಾಗ್ ಒಂದನ್ನು ಪ್ರದರ್ಶನಕ್ಕಿಟ್ಟಿದ್ದರು. ನಾಲ್ಕು ಪಾರ್ಲೆ-ಜಿ ಪ್ಯಾಕೆಟ್ ಇಡುವಷ್ಟು ದೊಡ್ಡದು. ಬೆಲೆ? ಮೂರುವರೆ ಸಾವಿರ ಡಾಲರ್ - ಮೂರ್ನಾಲ್ಕು ಲಕ್ಷ ರುಪಾಯಿ. ನಾನು ಕೂಡ ಬ್ರಾಂಡೆಡ್ ವಸ್ತುಗಳನ್ನು ಬಳಸುತ್ತೇನೆ.

ಆದರೆ ಹತ್ತಿಪ್ಪತ್ತು ಲಕ್ಷ ರೂಪಾಯಿಯ ಬ್ಯಾಗ್, ಸೂಟ್ ಕೇಸ್? ಇವುಗಳ ಎದುರು ನಿಂತು ನೋಡುವಾಗ ಅಷ್ಟಕ್ಕೂ ಮನುಷ್ಯ ಬ್ಯಾಗ್‌ಗಳನ್ನು ಆವಿಷ್ಕರಿಸಿದ್ದೇಕೆ? ಅವಶ್ಯಕತೆಯೇನು? ಎಂಬ ಪ್ರಶ್ನೆ ನೆನಪಾದರೆ ಗಲಿಬಿಲಿಯಾಗುತ್ತದೆ! ವಸ್ತುಗಳು ಅಳತೆಗೋಲುಗಳಾಗಿವೆ. ಡಿಕೆಶಿ ಎರಡೂವರೆ ಲಕ್ಷದ ಲೂಯಿ ವಿಟ್ಟೋನ್ ಶಾಲು ಹೊದೆಯುತ್ತಾರೆ. ಡೊನಾಲ್ಡ್ ಟ್ರಂಪ್ ಹಾಕಿಕೊಳ್ಳುವ ನೀಲಿ ಬಣ್ಣದ ಕೋಟು- ಇಟಾಲಿಯನ್ ಬ್ರಿಯೋನಿಗೆ- ಹತ್ತಿರತ್ತಿರ ಮೂವತ್ತೆರಡು ಲಕ್ಷ ರೂಪಾಯಿ.

ಬಟ್ಟೆ, ಶೂ, ಬೆಲ್ಟು, ಆಭರಣ, ಹ್ಯಾಂಡ್‌ಬ್ಯಾಗ್, ಕೈಚೀಲ, ಮೊಬೈಲ್, ಕನ್ನಡಕ, ಟಿವಿ ಇವೆಲ್ಲವೂ ತಮ್ಮ ತಮ್ಮದೇ ಲೋಕಗಳನ್ನು ಸೃಷ್ಟಿಸಿಕೊಂಡಿವೆ ಎನ್ನುತ್ತಾರೆ. ಒಂದೊಂದರದ್ದೂ ಒಂದೊಂದು ಲೋಕ ನಿಜ. ಆದರೆ ಇವು ಭೌತಿಕ ಲೋಕಗಳಲ್ಲ, ಅವೆಲ್ಲವೂ ಸೃಷ್ಟಿಯಾಗಿರುವುದು, ನೆಲೆನಿಂತಿರುವುದು ನಮ್ಮ ನಿಮ್ಮ ಎಲ್ಲರ ಮನಸ್ಸಿನಲ್ಲಿ, ಅಮೂಲ್ಯವೆನ್ನುವ ನಂಬಿಕೆಯ ಮೇಲೆ. ಹಾಗೆ ನೋಡಿದರೆ ಈ ರೀತಿಯ ಕಲ್ಪನೆಯ ಬೆಲೆ- ನಂಬಿಕೆಗಳ ಮೇಲೆಯೇ ನಮ್ಮ ಇಡೀ ವ್ಯವಸ್ಥೆ ನಿಂತಿದೆ.

ಸ್ಟಾಕ್ ಮಾರ್ಕೆಟ್‌ನಿಂದ ಸಾಮಾನ್ಯ ರುಪಾಯಿ ನೋಟಿನವರೆಗೆ. ಬೆಲೆ ಇದೆ ಎಂದು ಎಲ್ಲರೂ ನಂಬಿಕೊಂಡರೆ ಮಾತ್ರ ಬೆಲೆ. ನೋಟಿನ ಮೇಲೆ ಬರೆದಿರುತ್ತಾರೆ ನೋಡಿ- I promise to pay the bearer the sum of hundred rupees. ಏನರ್ಥ. ಈ ನೋಟಿಗೆ ನೂರು ರೂಪಾಯಿಯ ಬೆಲೆ ನನ್ನ ಭರವಸೆ. ಆರ್‌ಬಿಐ ಗವರ್ನರ್ ಹೀಗೆ ಬರೆದು ಸಹಿ ಹಾಕುವುದು ಆ ನಂಬಿಕೆಗೆ. ಸದ್ಯದ ವ್ಯವಸ್ಥೆಯಲ್ಲಿ- ಇಡೀ ಆರ್ಥಿಕತೆ, ಸ್ಟಾಕ್ ಮಾರ್ಕೆಟ್, ಜಾಗತಿಕ ಆರ್ಥಿಕತೆ ಎಲ್ಲವೂ ಭಗವಾನ್ ಭರೋಸಾ- ಕಲ್ಪಿತ ಸಾಮೂಹಿಕ ಭರವಸೆಯ ಮೇಲೆಯೇ ನಿಂತಿದೆ, ನಡೆಯುತ್ತದೆ.

ಅವು ಅವೈಜ್ಞಾನಿಕ ಎನ್ನುತ್ತಿಲ್ಲ- ಬದಲಿಗೆ ಗ್ರಹಿಸಬೇಕಾದ ವಿಷಯವೆಂದರೆ ಹಣ, ಅಂಕಿ-ಸಂಖ್ಯೆ ಇವೆಲ್ಲ ಹೇಗೆ ನಮ್ಮನ್ನಾವರಿಸಿವೆ ಎನ್ನುವುದನ್ನು. ಅವು ಬಹುತೇಕ ನಮ್ಮ ಹಿಡಿತದಲ್ಲಿಯೇ ಇಲ್ಲ, ಅವುಗಳ ಹಿಡಿತದಲ್ಲಿ ನಾವಿದ್ದೇವೆ.

ಯಾವಾಗ ರಿಸೆಶನ್- ಆರ್ಥಿಕ ಮುಗ್ಗಟ್ಟು ಬರಬಹುದು, ಮಾರ್ಕೆಟ್ ನೆಲಕಚ್ಚಬಹುದು- ಯಾರಿಗೂ ನಿಖರತೆ ಇಲ್ಲ. ಗಾಳಿ ಬೀಸಿದಂತೆ, ಟ್ರಂಪ್, ಮೋದಿ- ಯಾರೋ ಹೇಳಿಕೆ ಕೊಟ್ಟಂತೆ, ಯಾರದೋ ನಂಬಿಕೆ ಬದಲಾದಂತೆ ಈ ಅಂಕಿ-ಸಂಖ್ಯೆಗಳು ಹೆಚ್ಚು ಕಡಿಮೆಯಾಗಿ ಯಾರೋ ಕೆಲಸ ಕಳೆದುಕೊಳ್ಳಬಹುದು, ಇನ್ಯಾರೋ ದುಡ್ಡು, ಉಳಿತಾಯ ಕಳೆದುಕೊಳ್ಳಬಹುದು, ಯಾರೋ ಎಲ್ಲಾ ನಿರ್ಗತಿಕರಾಗಿ ಬಿಡಬಹುದು!

ಅದೆಲ್ಲ ಇರುವುದೇ ಹೀಗೆ. ಸಮಾಜ ಪ್ರತಿಯೊಂದು ವಸ್ತು, ವಿಷಯ, ನಂಬಿಕೆಗಳಿಗೆ ಒಂದು ಬೆಲೆ ಕಟ್ಟಿರುತ್ತದೆ. ಅದು ಸರಕಾರಿ ನಿಗದಿತ ಬೆಲೆ. ಹಾಗಾಗಿ ಅದುವೇ ನಮ್ಮ ವ್ಯಾವಹಾರಿಕ ಬೆಲೆ ಆಗಬೇಕೆಂದೇನಿಲ್ಲ. ಆದರೆ ನಾವೆಲ್ಲರೂ ಅದ್ಯಾವುದೋ ಒಂದಿಷ್ಟು compulsion ಒತ್ತಾಯದ ನಂಬಿಕೆಗೆ ಗಂಟುಬಿದ್ದು ಬದುಕನ್ನು ಇನ್ನಷ್ಟು ಸಂಕೀರ್ಣವಾಗಿಸಿ ತಲೆಬಿಸಿ ಮಾಡಿಕೊಂಡು ಬದುಕುತ್ತಿರುತ್ತೇವೆ!

– ಶಿಶಿರ್ ಹೆಗಡೆ

ಟಾಟಾ ಸಾಮ್ರಾಜ್ಯದ ನೈತಿಕ ಅಡಿಪಾಯ ಸೂನಿ ಟಾಟಾ

ಒಂದೊಳ್ಳೆ ಮಾತು

ಮುಂಬೈನ ಸಾಗರದ ಅಲೆಗಳು ಪ್ರತೀ ಬಾರಿಯೂ ದಡಕ್ಕೆ ಬಂದು ಮುತ್ತಿಕ್ಕುವಾಗ ಒಂದು ಬಗೆಯ ನಿಶ್ಯಬ್ದವಿರುತ್ತದೆ, ಅದರಲ್ಲಿ ಒಂದು ಶಕ್ತಿಯಿದೆ. ರತನ್ ಟಾಟಾ ಅವರ ಬದುಕಿನಲ್ಲೂ ಅಂತಹದ್ದೇ ಒಂದು ಮೌನ ಶಕ್ತಿ ಇತ್ತು, ಅದುವೇ ಅವರ ತಾಯಿ ಸೂನಿ ಟಾಟಾ. ಬೃಹತ್ ಉದ್ಯಮ ಸಾಮ್ರಾಜ್ಯದ ಅಡಿಪಾಯ ಕೇವಲ ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ಆಗಿರಲಿಲ್ಲ, ಅದು ತಾಯಿ ನೀಡಿದ ಮೌಲ್ಯಗಳ ಸಂಸ್ಕಾರದಿಂದ ನಿರ್ಮಾಣವಾಗಿತ್ತು.

ಸೂನಿ ಅವರು ಟಾಟಾ ಕುಟುಂಬದ ಸೊಸೆಯಾಗಿ ಬಂದಾಗ, ಅವರ ಮುಂದೆ ವೈಭವೋಪೇತ ಜೀವನದ ಎಲ್ಲ ಬಾಗಿಲುಗಳೂ ತೆರೆದಿದ್ದವು, ಆದರೆ ಅವರು ಆರಿಸಿಕೊಂಡಿದ್ದು ಮಾತ್ರ ಸರಳತೆ ಮತ್ತು ಗಾಂಭೀರ್ಯದ ಹಾದಿ.

ರತನ್ ಟಾಟಾ ಅವರು ತಮ್ಮ ಬಾಲ್ಯದ ದಿನಗಳ ಬಗ್ಗೆ ಮಾತನಾಡುವಾಗ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಅದು ರಜಾ ದಿನಗಳ ಸಮಯ. ರತನ್ ಮತ್ತು ಅವರ ಸಹೋದರ ವಿದೇಶಕ್ಕೆ ಪ್ರವಾಸ ಹೋಗಲು ಸಿದ್ಧರಾಗುತ್ತಿದ್ದರು. ಆ ಸಮಯದಲ್ಲಿ ಅವರ ತಾಯಿ ಸೂನಿ ಟಾಟಾ ಅವರು ಮಕ್ಕಳನ್ನು ಹತ್ತಿರ ಕರೆದು, ನೋಡಿ ಮಕ್ಕಳೇ, ನೀವು ಎಲ್ಲಿಗೆ ಹೋದರೂ, ಎಷ್ಟು ದೊಡ್ಡವರಾದರೂ ಸರಿ, ಎಂದಿಗೂ ನಿಮ್ಮ ಘನತೆಯನ್ನು ಬಿಟ್ಟು ಕೊಡಬೇಡಿ. ಸಂಕಷ್ಟದ ಸಮಯದಲ್ಲಿಯೂ ಕೂಡ ನಿಮ್ಮ ಮೌಲ್ಯಗಳ ಜೊತೆ ರಾಜಿ ಮಾಡಿಕೊಳ್ಳಬೇಡಿ ಎಂದು ತಿಳಿ ಹೇಳಿದ್ದರು.

ಕೌಟುಂಬಿಕ ಏರಿಳಿತಗಳು, ವೈಯಕ್ತಿಕ ನೋವುಗಳು

ಎದುರಾದಾಗಲೂ ಸೂನಿ ಅವರು ಕುಗ್ಗಲಿಲ್ಲ. ಅವರ ವ್ಯಕ್ತಿತ್ವದಲ್ಲಿ ಒಂದು ಘನತೆ ಇತ್ತು. ಸಾರ್ವಜನಿಕವಾಗಿ ಅವರು ಎಂದೂ ಪ್ರಚಾರ ಬಯಸಲಿಲ್ಲ, ಕ್ಯಾಮೆರಾಗಳ ಫ್ಲ್ಯಾಶ್‌ಲೈಟ್‌ಗಳಿಗಿಂತ ಮನೆಯ ಒಳಗಿನ ದೀಪದ ಬೆಳಕಿನಲ್ಲಿ ಮಕ್ಕಳ ಭವಿಷ್ಯ ರೂಪಿಸುವುದೇ ಅವರಿಗೆ ಮುಖ್ಯವಾಗಿತ್ತು.

ರತನ್ ಟಾಟಾ ಅವರು ತಮ್ಮ ಜೀವನದ ಸಂಧ್ಯಾಕಾಲದಲ್ಲೂ ನನ್ನ ತಾಯಿ ಕಲಿಸಿದ ಪಾಠಗಳು ನನ್ನನ್ನು ನಡೆಸುತ್ತಿವೆ, ನನ್ನ ತಾಯಿ ಮತ್ತು ಅಜ್ಜಿ ನಮಗೆ ಕಲಿಸಿದ್ದು ಕೇವಲ ಬದುಕುವುದನ್ನಲ್ಲ, ಬದಲಾಗಿ ಘನತೆಯಿಂದ ಬದುಕುವುದನ್ನು. ನಾವು ಶಾಲೆಗೆ ಹೋಗುವಾಗ ಅಥವಾ ಗೆಳೆಯರೊಂದಿಗೆ ಇರುವಾಗ ನಮಗೆ ಸೌಲಭ್ಯಗಳ ಕೊರತೆ ಇರಲಿಲ್ಲ, ಆದರೆ ನಮಗೆ ಲಭ್ಯವಿದ್ದದ್ದು ಕೇವಲ ಶಿಸ್ತು ಮತ್ತು ಸಂಸ್ಕಾರ ಮಾತ್ರ ಎಂದು ನೆನೆಯುತ್ತಿದ್ದರು.

ಸೋಲನ್ನು ಹೇಗೆ ವಿನಮ್ರವಾಗಿ ಸ್ವೀಕರಿಸಬೇಕು ಮತ್ತು ಗೆಲುವನ್ನು ಹೇಗೆ ಸಮಾಜಕ್ಕೆ ಅರ್ಪಿಸಬೇಕು ಎಂಬ ಪಾಠ ಅವರಿಗೆ ಸಿಕ್ಕಿದ್ದು ಸೂನಿ ಅವರ ಮಡಿಲಲ್ಲೇ. ಸೂನಿ ಟಾಟಾ, ರತನ್ ಟಾಟಾ ಅವರು ಇಂದು ಭೌತಿಕವಾಗಿ ನಮ್ಮ ನಡುವೆ ಇಲ್ಲದಿರಬಹುದು, ಆದರೆ ಭಾರತದಾದ್ಯಂತ ಹರಡಿರುವ ಟಾಟಾ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಲಕ್ಷಾಂತರ ಜನರ ಬದುಕಿನಲ್ಲಿ ಮಿಂಚುವ ಭರವಸೆಯ ಕಂಗಳಲ್ಲಿ ಅವರ ಪ್ರತಿಬಿಂಬವಿದೆ.

> **ಕೌಟುಂಬಿಕ ಏರಿಳಿತಗಳು, ವೈಯಕ್ತಿಕ ನೋವುಗಳು ಎದುರಾದಾಗಲೂ ಸೂನಿ ಅವರು ಕುಗ್ಗಲಿಲ್ಲ. ಅವರ ವ್ಯಕ್ತಿತ್ವದಲ್ಲಿ ಒಂದು ಘನತೆ ಇತ್ತು. ಸಾರ್ವಜನಿಕವಾಗಿ ಅವರು ಎಂದೂ ಪ್ರಚಾರ ಬಯಸಲಿಲ್ಲ. ಕ್ಯಾಮೆರಾಗಳ ಫ್ಲ್ಯಾಶ್‌ಲೈಟ್‌ಗಳಿಗಿಂತ ಮನೆಯ ಒಳಗಿನ ದೀಪದ ಬೆಳಕಿನಲ್ಲಿ ಮಕ್ಕಳ ಭವಿಷ್ಯ ರೂಪಿಸುವುದೇ ಅವರಿಗೆ ಮುಖ್ಯವಾಗಿತ್ತು.**

ಒಬ್ಬ ಉದ್ಯಮಿ ಕೇವಲ ಲಾಭದ ಬಗ್ಗೆ ಯೋಚಿಸದೆ, ದೇಶದ ಬಗ್ಗೆ ಯೋಚಿಸುವಂತೆ ಪ್ರೇರೇಪಿಸಿದ ಆ ಮೌನ ಸಂಸ್ಕೃತಿಯೇ ಸೂನಿ ಟಾಟಾ. ಅವರು ಕೇವಲ ಒಬ್ಬ ತಾಯಿಯಾಗಿರಲಿಲ್ಲ, ಅವರು ಭಾರತದ ಅತ್ಯಂತ ನೈತಿಕ ಉದ್ಯಮಿಯ ನೈತಿಕ ದಿಕ್ಸೂಚಿಯಾಗಿದ್ದರು.

ಪ್ರಚಾರವಿಲ್ಲದೆಯೇ ಒಬ್ಬ ವ್ಯಕ್ತಿ ಹೇಗೆ ಜಗತ್ತನ್ನು ಬದಲಿಸಬಲ್ಲ ಎಂಬುದಕ್ಕೆ ಸೂನಿ ಟಾಟಾ ಅವರ ಜೀವನವೇ ಒಂದು ಸುಂದರ ಉದಾಹರಣೆ. ಪ್ರಪಂಚಕ್ಕೆ ಕಾಣುವುದು ಕೇವಲ ಕಟ್ಟಡದ ಎತ್ತರ ಮಾತ್ರ, ಆದರೆ ಆ ಎತ್ತರಕ್ಕೆ ಕಾರಣವಾಗಿ ನೆಲದಡಿಯಲ್ಲಿ ಮೌನವಾಗಿ ಮಲಗಿರುವ ಅಡಿಪಾಯಕ್ಕೆ ತಾಯಿಯೆಂಬ ಹೆಸರಿರುತ್ತದೆ.

ಅನೇಕ ಸಂದರ್ಭಗಳಲ್ಲಿ ನಮಗೆ ಬಾಲ್ಯದಲ್ಲಿ ತಾಯಿ ಹೇಳಿಕೊಟ್ಟ ಶಿಸ್ತಿನ ಪಾಠಗಳು ಅವಳಿಂದ ಸಾವಿರಾರು ಮೈಲಿಗಳು ದೂರವಿದ್ದರೂ ನೆನಪಿರುತ್ತವೆ. ಪ್ರತೀ ಸಂದರ್ಭದಲ್ಲೂ ನಮಗೆ ಗೊತ್ತಿಲ್ಲದೆ ನಾವಾಡುವ ಮಾತುಗಳು, ತೋರಿಸುವ ಸಂಯಮ, ಅಗತ್ಯಬಿದ್ದಾಗ ಉಪಯೋಗಿಸುವ ಕೌಶಲ್ಯ ಎಲ್ಲವೂ ಅಮ್ಮನಿಂದ ಬಂದ ಬಳುವಳಿಗಳೇ.

ಆದ್ದರಿಂದಲೇ ಜೀವನದಲ್ಲಿ ಅದೇನೇ ಸಾಧನೆ ಮಾಡಿದರೂ ಅದು ನಮ್ಮದು ಎಂದು ಬೀಗುವ ಮುಂಚೆ, ನಮ್ಮನ್ನು ಅಷ್ಟರಮಟ್ಟಿಗೆ ಬೆಳೆಸಿದ ತಂದೆ-ತಾಯಿಯ ಕೊಡುಗೆಯನ್ನು ಸದಾ ಸ್ಮರಿಸಬೇಕು, ಈ ಕೃತಜ್ಞತೆ ಸದಾ ನಮ್ಮನ್ನು ಕಾಯಲಿ.

– ರೂಪಾ ಗುರುರಾಜ್

ದಿಡಗದಲ್ಲಿ ರಾಗಿ ಖರೀದಿ ಕೇಂದ್ರಕ್ಕೆ ಪ್ರಸ್ತಾವನೆ

ಚ.ರಾ.ಪಟ್ಟಣದಾದ್ಯಂತ 6 ಕೇಂದ್ರ ಆರಂಭ | ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಬೆಂಬಲ ಬೆಲೆಯಡಿ ರಾಗಿ ಖರೀದಿಸಲು ತಾಲ್ಲೂಕಿನಲ್ಲಿ 6 ಖರೀದಿ ಕೇಂದ್ರ ತೆರೆಯಲಾಗಿದೆಯಾದರೂ ಹೆಚ್ಚುವರಿಯಾಗಿ ದಿಡಗದಲ್ಲೂ ಕೇಂದ್ರದ ಅವಶ್ಯಕತೆಯಿದೆ. ಈ ಸಂಬಂಧ ಜಿಲ್ಲಾಧಿಕಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಶನಿವಾರ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ವತಿಯಿಂದ 2025-26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ನೇರವಾಗಿ ರಾಗಿ ಖರೀದಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ತಾಲ್ಲೂಕಿನ ಗಡಿ ಭಾಗದ ರೈತರ ಅನುಕೂಲಕ್ಕಾಗಿ ದಿಡಗ ಗ್ರಾಮದಲ್ಲಿ ಖರೀದಿ ಕೇಂದ್ರ ತೆರೆಯಲು ಮನವಿ ಸಲ್ಲಿಸಲಾಗಿದೆ. ಜಿಲ್ಲಾಧಿಕಾರಿ ಅವರು ರೈತರ ಸಮಸ್ಯೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಖರೀದಿ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಲಾಗುವುದು, ಪ್ರಸಕ್ತ ವರ್ಷ ಒಳ್ಳೆಯ ಬೆಲೆಯನ್ನು ಸರ್ಕಾರ ನಿಗದಿಪಡಿಸಿ

ಕೇಂದ್ರಗಳ ನೋಂದಣಿ ವಿವರ

ಚನ್ನರಾಯಪಟ್ಟಣ	2627
ಹಿರೀಸಾವೆ	2854
ನುಗ್ಗೇಹಳ್ಳಿ	3996
ಶ್ರವಣಬೆಳಗೊಳ	1845
ಉದಯಪುರ	1287
ಬಾಗೂರು	1826

ರಾಗಿ ಖರೀದಿಸುತ್ತಿದೆ ಎಂದು ಅವರು ತಿಳಿಸಿದರು.

ರೈತರಿಂದ ನೇರವಾಗಿ ಖರೀದಿಸಿ ಅದರ ಹಣವನ್ನು ಯಾವ ಮಧ್ಯವರ್ತಿಗೆ ಆಸ್ಪದ ನೀಡದೇ ರೈತರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಸಂದಾಯ ಮಾಡಲಾಗುತ್ತದೆ. ರೈತರು ರಾಗಿ ಖರೀದಿ ಕೇಂದ್ರಕ್ಕೆ ಗುಣಮಟ್ಟದ ರಾಗಿಯನ್ನು ಸರಬರಾಜು ಮಾಡಲು ಆದ್ಯತೆ ನೀಡಬೇಕು. ತಾಲ್ಲೂಕಿನಲ್ಲಿ ಖರೀದಿಯಾದ ರಾಗಿಯನ್ನು ಸ್ಥಳೀಯ ಪಡಿತರ ವಿತರಣಾ ವ್ಯವಸ್ಥೆ ಮೂಲಕವೇ ವಿತರಿಸಲಾಗುತ್ತದೆ. ಸಾರ್ವಜನಿಕ ಉಪಯೋಗಕ್ಕೆ ಬರುವ ರಾಗಿ ಶುದ್ಧವಾಗಿರುವಂತೆ ಅಧಿಕಾರಿಗಳು ವಿಶೇಷ ಗಮನ ಹರಿಸಬೇಕೆಂದರು.

ಕ್ವಿಂಟಾಲ್‌ಗೆ 4886 ರೂ. ನಿಗದಿ: 2025-26ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್ ರಾಗಿಗೆ 4886 ರೂ. ನಿಗದಿಪಡಿಸಲಾಗಿದೆ. ಪ್ರತಿ ರೈತರಿಂದ ಒಂದು ಎಕರೆಗೆ 10 ಕ್ವಿಂಟಾಲ್‌ನಂತೆ ಗರಿಷ್ಟ 50 ಕ್ವಿಂಟಾಲ್ ಮೀರದಂತೆ ನೋಂದಣಿ ಮಾಡಿಕೊಂಡಿರುವ 14,435 ರೈತರಿಂದ 3,39,388 ಕ್ವಿಂಟಾಲ್ ಗುಣಮಟ್ಟದ ರಾಗಿ ಖರೀದಿಸಲಾಗುವುದೆಂದರು.

ಈಗಾಗಲೇ ರೈತರು ರಾಗಿ ಪೂರೈಕೆಗೆ ನೋಂದಣಿ ಮಾಡಿಸಿಕೊಂಡಿದ್ದಾರೆ ಖರೀದಿ ಕೇಂದ್ರದಲ್ಲಿ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ. ನೋಂದಣಿ ಮಾಡಿಕೊಂಡಿರುವ ಎಲ್ಲಾ ರೈತರ ರಾಗಿ ಖರೀದಿ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಸೋಮಶೇಖರ್, ಅಧ್ಯಕ್ಷ ವೆಂಕಟೇಶ್ ಮೂರ್ತಿ, ನಿರ್ದೇಶಕ ರಮೇಶ್ ಕುಂಬಾರಹಳ್ಳಿ, ಎಂ.ಆರ್. ಅನಿಲ್ ಕುಮಾರ್, ಮುಖಂಡರಾದ ಬೋರೇಗೌಡ, ಮೂಡನಳ್ಳಿ, ಚಂದ್ರಣ್ಣ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಜಿಲ್ಲಾ ವ್ಯವಸ್ಥಾಪಕಿ ಅನುರಾಧ, ತಾಲ್ಲೂಕು ಆಹಾರ ಶಿರಸ್ತೇದಾರ್ ಹೇಮಂತ್‌ಕುಮಾರ್ ಇತರರಿದ್ದರು.

ಪುಲ್ವಾಮಾ ದಾಳಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ

» ಮೊದಲನೇ ಪುಟದಿಂದ

ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ನಮ್ಮ ನಿರೀಕ್ಷೆಗೂ ಮೀರಿ ಮಾಜಿ ಸೈನಿಕರು, ಅವರ ಕುಟುಂಬ ಸದಸ್ಯರು ಭಾಗಿಯಾಗಿ ಜಾಥಾವನ್ನು ಯಶಸ್ವಿಗೊಳಿಸಿದ್ದಾರೆಂದು ಸಂತಸ ವ್ಯಕ್ತಪಡಿಸಿದರು.

ಅರೆಸೇನಾ ಪಡೆ ನಿವೃತ್ತ ಯೋಧರ ಕೆಲ ಬೇಡಿಕೆ ಇದ್ದು, ಈಗಾಗಲೇ ಸರ್ಕಾರದ ಮುಂದೆ ಇಡಲಾಗಿದ್ದು, ಈಡೇರಿಸುವ ವಿಶ್ವಾಸವಿದೆ ಎಂದ ಅವರು, ಮುಂದಿನ ದಿನಗಳಲ್ಲಿ ನಮ್ಮ ಒಕ್ಕೂಟದಿಂದ ವಿವಿಧ ರೀತಿಯ ಸಮಾಜ ಸೇವೆಯಲ್ಲೂ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು.

ರ‍್ಯಾಲಿಯಲ್ಲಿ ಉಪಾಧ್ಯಕ್ಷರಾದ ಎಂ.ಜಿ.ರಮೇಶ್, ನಾರಾಯಣಪ್ಪ, ನಾಗಪ್ಪ, ಕಾರ್ಯದರ್ಶಿ ಹೆಚ್.ಆರ್. ವಿಜಯಕುಮಾರ್, ಹೆಚ್.ಕುಮಾರ್ ಮೊದಲಾದವರು ಭಾಗಿಯಾಗಿದ್ದರು.

ಎಸ್‌ಸಿ-ಎಸ್‌ಟಿ ಗೆ ನಿವೇಶನ ನೀಡಲು ಒಪ್ಪಿಗೆ

» ಮೊದಲನೇ ಪುಟದಿಂದ

ಸಮುದಾಯವಾಗಿದೆ. ಅಂಬೇಡ್ಕರ್ ಅವರ ಚಿಂತನೆಗಳ ಆಧಾರದ ಮೇಲೆ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ಸಮಾಜದಲ್ಲಿ ಗೊಂದಲ ಸೃಷ್ಟಿಸದೆ, ಏಕತೆ ಕಾಪಾಡಿಕೊಂಡು ಮುನ್ನಡೆಯ ಬೇಕೆಂದು ಸಲಹೆ ನೀಡಿದರು.

ಸಮಾಜದಲ್ಲಿ ತಾರತಮ್ಯ ನಿವಾರಣೆಗೆ ಸಾಮಾಜಿಕ ಬಹಿಷ್ಕಾರ ವಿರೋಧಿ ಕಾಯ್ದೆ ಜಾರಿಯಲ್ಲಿದೆ. ಮೀಸಲಾತಿಗಾಗಿ ಹೋರಾಟ ನಡೆಸಬೇಕಾದ ಪರಿಸ್ಥಿತಿ ಏಕೆ ಬರುತ್ತದೆ ಎಂಬುದನ್ನು ಸಮುದಾಯ ಚಿಂತಿಸಬೇಕು. ನಮ್ಮ ಮಕ್ಕಳು ಕೂಡ ಪ್ರತಿಭಾವಂತರಾಗಿದ್ದು, ಸ್ಪರ್ಧಾತ್ಮಕವಾಗಿ ಬೆಳೆಯಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 1001 ದಿನಗಳನ್ನು ಪೂರೈಸಿದೆ ಎಂದರು.

ಗೃಹಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ದೊರಕಬೇಕೆಂಬ ಆಶಯವನ್ನು ದಾಖಲಿಸಿದ್ದಾರೆ. ಬಸವಣ್ಣನವರೂ ಸಹ ಸಮಾನತೆಯ ಸಂದೇಶವನ್ನು ಸಾರಿದ್ದರು. ದಲಿತ ನೌಕರರಿಗೆ ಸರ್ಕಾರದಿಂದ ಅಗತ್ಯ ಸೌಲಭ್ಯಗಳು

ಲಭ್ಯವಾಗುತ್ತಿದ್ದು, ಯಾವುದೇ ತೊಂದರೆಗಳಿಲ್ಲದೆ ಉತ್ತಮ ಜೀವನ ನಡೆಸುವ ಅವಕಾಶ ಸಿಕ್ಕಿದೆ. ಸಂವಿಧಾನ ನೀಡಿರುವ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಸಮಾಜದಲ್ಲಿ ಮುಂದೆ ಬರಬೇಕು ಎಂದು ಅವರು ಸಲಹೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಇತರೆ ಸಮುದಾಯಗಳಿಗೆ ಅವರ ಪೂರ್ವಜರು ಆಸ್ತಿ ಬಿಟ್ಟಿದ್ದಾರೆ. ನಮ್ಮ ಸಮುದಾಯಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟಿರುವ ಸಂವಿಧಾನವೇ ಮಹತ್ವದ ಆಸ್ತಿ. ಶಿಕ್ಷಣವು ಹುಲಿಯ ಹಾಲಿನಂತೆ, ಅದನ್ನು ಕುಡಿದ ಬಳಿಕ ಗರ್ಜಿಸಲೇಬೇಕೆಂದು ಅಂಬೇಡ್ಕರ್ ಹೇಳಿದ್ದಾರೆ. ಇಂದು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ. ಇದೇ ರೀತಿಯ ಕಾರ್ಯಕ್ರಮಗಳನ್ನು ಹೊಳೆನರಸೀಪುರದಲ್ಲೂ ನಡೆಸಿರುವುದು ಶ್ಲಾಘನೀಯ ವಿಚಾರವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಮಾತನಾಡಿದರು. ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಹೈಕೋರ್ಟ್ ಸರ್ಕಾರಿ ಅಭಿಯೋಜಿತ ವಕೀಲೆ ಸತ್ಯವತಿ, ಎಸ್‌ಸಿ-ಎಸ್‌ಟಿ ನೌಕರರ ಸಂಘದ ಸಂಚಾಲಕ ಎಸ್. ಉಮೇಶ್, ಅಧ್ಯಕ್ಷ ಬಿ.ಕೆ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಯತೀಶ್, ಪುರಸಭೆ ಮಾಜಿ ಅಧ್ಯಕ್ಷ ಲಕ್ಷ್ಮಣ್ ಉಪಸ್ಥಿತರಿದ್ದರು.

ಸುಂದರೇಶ್, ದೇವರಾಜೇಗೌಡ ವಿರುದ್ಧ ಎಫ್‌ಐಆರ್



• ಪ್ರಜೋದಯ ವರದಿ

ಹಾಸನ: ಹೊಳೆನರಸೀಪುರ ವಿಧಾನಸಭೆ ಪರಾಜಿತ ಅಭ್ಯರ್ಥಿ ದೇವರಾಜೇಗೌಡ ಹಾಗೂ ನನ್ನ ಮಾಜಿ ಪತಿ ಸುಂದರೇಶ್ ಅವರು ತನ್ನ ಘನತೆಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ ಮಾತ್ರವಲ್ಲದೆ ಜೀವ ಬೆದರಿಕೆ ಹಾಕಿದ್ದಾರೆಂದು ಮಹಿಳಾ ಧ್ವನಿ ಸಂಘದ ರಾಜ್ಯಾಧ್ಯಕ್ಷೆ ಅನ್ನಪೂರ್ಣಗೌಡ ಅವರು ಎಫ್‌ಐಆರ್ ದಾಖಲಿಸಿದ್ದಾರೆ.

ಹಲವು ದಿನಗಳಿಂದ ದೇವರಾಜೇಗೌಡ ಹಾಗು ಅನ್ನಪೂರ್ಣಗೌಡ ವಿರುದ್ಧ ಮಾತಿನ ವಾಕಮರ ಜೋರಾಗಿದೆ. ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಅನ್ನಪೂರ್ಣಗೌಡ ವಿರುದ್ಧ ದೇವರಾಜೇಗೌಡ ಅವರು ಲಘುವಾಗಿ ಮಾತನಾಡಿದ್ದರು. ಅದಾದ ಬಳಿಕ ಅವರ ಮಾಜಿ ಪತಿ ಸುಂದರೇಶ್ ಕೂಡ ವಿಡಿಯೋ ಮೂಲಕ ತನ್ನ ಚಾರಿತ್ರ್ಯವಧೆ ಮಾಡಿದ್ದಾರೆಂದು ಅನ್ನಪೂರ್ಣಗೌಡ ಆರೋಪಿಸಿದ್ದಾರೆ.

ಫೆ. 12ರಂದು ಪೊಲೀಸ್ ಠಾಣೆಗೆ ಬಂದಿದ್ದಾಗ ದೇವರಾಜೇಗೌಡರು ಕೊಲೆ ಬೆದರಿಕೆ ಹಾಕಿದ್ದಾರೆ. ಈ ಇಬ್ಬರಿಂದ ನನಗೆ ಜೀವ ಬೆದರಿಕೆಯಿದ್ದು, ರಕ್ಷಣೆ ನೀಡಬೇಕು ಹಾಗು ಘನತೆಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಶಿವ ದೇವಾಲಯಗಳಿಗೆ ಗಂಗಾಜಲ ವಿತರಣೆ

• ಪ್ರಜೋದಯ ವರದಿ

ಹಾರನಹಳ್ಳಿ: ಮುಜರಾಯಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಅವರು ಮುಜರಾಯಿ ದೇವಾಲಯಗಳಿಗೆ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆಗೆ ಗಂಗಾಜಲವನ್ನು ತಾಲ್ಲೂಕಿನ ದೇವಾಲಯಗಳಿಗೆ ಮುಜರಾಯಿ ಶಾಖೆಯ ಶಿರಸ್ತೇದಾರ್ ಶಿವಶಂಕರ್ ಮೂಲಕ ಅರ್ಚಕರಿಗೆ ವಿತರಣೆ ಮಾಡಿದರು.

ಭಾನುವಾರ ಈಶ್ವರ ಲಿಂಗಕ್ಕೆ ಅಭಿಷೇಕ ಮಾಡಿ ಭಕ್ತರಿಗೆ ತೀರ್ಥ ಹಂಚುವಂತೆ ವಿತರಿಸಿದರು. ಹಾರನಹಳ್ಳಿಯ ಶ್ರೀ ಭೈರವೇಶ್ವರ ದೇವಸ್ಥಾನ ಶ್ರೀ ಕೊಡಮ್ಮ ದೇವಿ ದೇವಸ್ಥಾನ, ಆಂಜನೇಯ ದೇವಸ್ಥಾನ, ಕಲ್ಲೇಶ್ವರ ದೇವಸ್ಥಾನ ಹಾಗೂ ಚಂದ್ರಮೌಳೇಶ್ವರ ದೇವಸ್ಥಾನಗಳಿಗೆ ಶಿವರಾತ್ರಿಯ ದಿನ ಅಭಿಷೇಕಕ್ಕೆ ಎಲ್ಲಾ ಅರ್ಚಕರಿಗೆ ವಿತರಣೆ ಮಾಡಲಾಯಿತು.

ಅರಸೀಕೆರೆ ತಾಲೂಕಿನ ಮನಕತ್ತೂರು ದೇವಸ್ಥಾನ, ಅರಸೀಕೆರೆಯ ಶ್ರೀ ಚಂದ್ರಮೌಳೇಶ್ವರ, ಶ್ರೀ ಭವಾನಿ ಶಂಕರ ದೇವಾಲಯಗಳಿಗೆ ತಾಲ್ಲೂಕಿನ ಇತರ ದೇವಾಲಯಗಳಿಗೆ ಗಂಗಾಜಲವನ್ನು ವಿತರಣೆ ಮಾಡಲಾಯಿತು.

ದುಶ್ಚಟದಿಂದ ಕುಟುಂಬದ ನೆಮ್ಮದಿ ಹಾಳು

ಹಳೇಬೀಡಿನಲ್ಲಿ ನಮನ್ ನಶಾ ಮುಕ್ತ ಶಿಬಿರ ಆಯೋಜನೆ

• ಪ್ರಜೋದಯ ವರದಿ

ಹಳೇಬೀಡು: ಮದ್ಯಪಾನ ಹಾಗು ಮಾದಕ ವಸ್ತು ಬಳಕೆಯಿಂದಾಗುವ ದುಷ್ಪರಿಣಾಮ ಹಾಗು ಮಾನಸಿಕ ಆರೋಗ್ಯ ಕುರಿತು ಜಾಗೃತಿ ಮೂಡಿಸಲು ನಮನ್ ನಶಾ ಮುಕ್ತ ಶಿಬಿರವನ್ನು ರಾಷ್ಟ್ರೀಯ ಆರೋಗ್ಯ ಮಿಷನ್‌ನಿಂದ ಆಯೋಜಿಸಲಾಗಿತ್ತು.

ನಿಮ್ಹಾನ್ಸ್, ಆಶ್ರಯ ಹರ್ಷ ಟ್ರಸ್ಟ್, ರಾಷ್ಟ್ರೀಯ ಆರೋಗ್ಯ ಮಿಷನ್ ಹಾಗು ಹಳೇಬೀಡು ಸಮುದಾಯ ಆರೋಗ್ಯ ಕೇಂದ್ರದಿಂದ ಸಮಗ್ರ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಉಡಸಲಮ್ಮ ದೇವಾಲಯ ಆವರಣದಲ್ಲಿ ಹಮ್ಮಿಕೊಂಡಿದ್ದ ನಮನ್ ನಶಾ ಮುಕ್ತ ಶಿಬಿರದಲ್ಲಿ ಮನೋತಜ್ಞೆ ಡಾ|| ತೇಜೋವತಿ ಅವರು ಮಾತನಾಡಿ, ವ್ಯಸನದಿಂದ ಬಳಲುವ ವ್ಯಕ್ತಿಗಳು ಹಾಗು ಕುಟುಂಬಗಳಿಗೆ ಸಮಾಲೋಚನೆ ನಡೆಸಲಾಗುವುದು. ವ್ಯಸನಿಗಳ ಆರೋಗ್ಯ ಪರೀಕ್ಷೆ ನಡೆಸಿ, ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆ ನೀಡಲಾಗುವುದು. ಅವರು ಸಂಪರ್ಕ

ದಲ್ಲಿದ್ದು, ಸೇವೆಗಳನ್ನು ನೀಡಲಾಗುವುದೆಂದು ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಸ್.ಸಿ.ವಿರೂಪಾಕ್ಷ ಅವರು ಮಾತನಾಡಿ, ದುಶ್ಚಟಗಳಿಗೆ ಬಲಿಯಾದವರು ಮಾನಸಿಕವಾಗಿ ಸಮಸ್ಯೆ ಎದುರಿಸಬೇಕಾಗುತ್ತದೆ. ಅಲ್ಲದೆ ಸಂಪೂರ್ಣ ಕುಟುಂಬದ ನೆಮ್ಮದಿ ಹಾಳಾಗುತ್ತದೆ ಎಂಬುದನ್ನು ಎಲ್ಲರೂ ಅರಿಯಬೇಕೆಂದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹಕ್ಕಣ್ಣ ಕುಮಾರ್ ಅವರು ಮಾತನಾಡಿ, ಮಾನಸಿಕವಾಗಿ ಸದೃಢರಾದವರು ಜೀವನದಲ್ಲಿ ಏನಾನ್ನಾದರೂ ಸಾಧಿಸಬಹುದು. ವ್ಯಸನಗಳ ದಾಸರಾಗದೆ, ಉತ್ತಮ ಜೀವನ ಸಾಗಿಸಿದರೆ ಸಮಾಜದಲ್ಲಿ ಗೌರವ ಸಂಪಾದಿಸಬಹುದೆಂದರು.

ಮನೋ ವೈದ್ಯ ಡಾ|| ಪ್ರಶಾಂತ್ ಷಾ, ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿ ಶೈಲಜಾ, ಸಮುದಾಯ ಆರೋಗ್ಯ ಕಾರ್ಯಕರ್ತರಾದ ದಿವ್ಯಾಶ್ರೀ, ಪುನಿತ್, ದಿವ್ಯಾ, ವಿನುತಾ, ಅಪೂರ್ವ, ನಿರಂಜನ್, ಆಶಾ ಕಾರ್ಯಕರ್ತೆಯರಾದ ಪುಷ್ಪಾ, ದಾಕ್ಷಾಯಿಣಿ, ವಸಂತಾ, ನಾಗರತ್ನ ಮತ್ತಿ ತರರು ಹಾಜರಿದ್ದರು.

ಮದುವೆಗೆ ಬಂದಿದ್ದ ಮಹಿಳೆ ನಿಗೂಢ ಕಣ್ಮರೆ

» ಮೊದಲನೇ ಪುಟದಿಂದ

ತನ್ನ ಚಿಕ್ಕಮ್ಮ ಸೌಮ್ಯಾ ಅವರಿಗೆ ಕರೆ ಮಾಡಿ ಪರಿಚಯಸ್ಥರು ಸಿಕ್ಕಿದ್ದಾರೆ. ಅವರ ಜೊತೆ ಹೋಗುತ್ತಿದ್ದೇನೆಂದು ಹೇಳಿದ್ದಾರೆ. ಅದಕ್ಕೂ ಮೊದಲು ಪತಿ ರುದ್ರೇಶ್‌ಗೂ ಕರೆ ಮಾಡಿದ್ದ ಪ್ರಿಯಾಂಕ ಕುಣಿಗಲ್‌ಗೆ ಬಂದು ಕರೆದುಕೊಂಡು ಹೋಗಿ ಎಂದಿದ್ದರಂತೆ. ಆದಾದ ಬಳಿಕ ಸೌಮ್ಯ ರಾತ್ರಿ 8:30ರ ಸಮಯದಲ್ಲಿ ಪ್ರಿಯಾಂಕಗೆ ಕರೆ ಮಾಡಿದ್ದು, ಫೋನ್ ಸ್ವಿಚ್‌ಆಫ್ ಆಗಿದೆ.

ಇತ್ತ ಪತ್ನಿ ಬರುತ್ತಾಳೆಂದು ಕುಣಿಗಲ್‌ಗೆ ಪತಿ ರುದ್ರೇಶ್ ಬಂದು ಕರೆ ಮಾಡಿದಾಗ ಫೋನ್ ಸ್ವಿಚ್ ಆಫ್ ಬಂದಿದೆ. ಅನುಮಾನಗೊಂಡು ಸೌಮ್ಯ ಅವರಿಗೆ ಕರೆ ಮಾಡಿದ್ದು ಪರಿಚಯಸ್ಥರು ಸಿಕ್ಕಿದ್ದಾರೆ. ಅವರ ಜೊತೆ ಹೋಗುತ್ತಿದ್ದೇನೆಂದು ಹೇಳಿದ್ದಳು ಅಷ್ಟೇ ಎಂದಿದ್ದಾರೆ. ಶುಕ್ರವಾರ ಬೇಲೂರು ಠಾಣೆ ಪೊಲೀಸರಿಗೆ ದೂರು ನೀಡಲು ಬಂದಿದ್ದು, ಅರೇಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಿ ಎಂದು ಕಳುಹಿಸಿದ್ದಾರೆ. ನಂತರ ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿದೆ.

ಶನಿವಾರ ಬೆಳಿಗ್ಗೆ ಮತ್ತೆ ಪ್ರಿಯಾಂಕ ಪತಿ ಮನೆಯವರು ಕಲ್ಕೆರೆ ಬಳಿ ಬಂದು ಹುಡುಕಾಟ ನಡೆಸಿದಾಗ ಒಳಉಡುಪು, ಒಂದು ಚಪ್ಪಲಿ ಸಿಕ್ಕಿದೆ. ಅದರಿಂದ ಸ್ವಲ್ಪ ದೂರದಲ್ಲೇ ವ್ಯಾನಿಟಿ ಬ್ಯಾಗ್ ಬಿದ್ದಿದ್ದು ಪ್ರಿಯಾಂಕ ಕಣ್ಮರೆಯಾಗಿರುವ ಬಗ್ಗೆ ಹಲವು ಅನುಮಾನಗಳು ಹುಟ್ಟಿಕೊಂಡಿವೆ. ಪ್ರಿಯಾಂಕ ಮೊಬೈಲ್ ಕಡೆಯದಾಗಿ ಕಲ್ಕೆರೆ ಸಮೀಪವೇ ಸ್ವಿಚ್ಡ್‌ಆಫ್ ಆಗಿದ್ದು, ಆ ಮಾರ್ಗದ ಎಲ್ಲಾ ಸಿಸಿಟಿವಿಗಳ ಪರಿಶೀಲನೆ ನಡೆಸುತ್ತಿದ್ದಾರೆ. ಪ್ರಿಯಾಂಕ ದಿಢೀರ್ ಕಣ್ಮರೆಯಿಂದ ಕುಟುಂಬಸ್ಥರಲ್ಲಿ ಆತಂಕ ಮನೆ ಮಾಡಿದೆ.

ಪೊಲೀಸರು, ಅಗ್ನಿಶಾಮಕ ತಂಡ ಬೆಳಿಗ್ಗೆಯಿಂದ ಸಂಜೆವರೆಗೂ ಕೆರೆಯಲ್ಲಿ ಹುಡುಕಾಟ ನಡೆಸಿದರೂ ಕಾಣೆಯಾದ ಮಹಿಳೆಯ ಸುಳಿವು ಪತ್ತೆಯಾಗದ ಹಿನ್ನಲೆ ಮುಳುಗು ತಜ್ಞ ಈಶ್ವರ್ ಮಲ್ಪೆ ಅವರ ನೆರವು ಕೋರಿದ್ದಾರೆ. ಈಶ್ವರ್ ಅವರು ಕೆರೆಗಿಳಿದು ಶೋಧಕಾರ್ಯ ನಡೆಸಲಿದ್ದಾರೆ. ಮಹಿಳೆಯ ಕುಟುಂಬಸ್ಥರು ಕೆರೆಯ ಸಮೀಪದಲ್ಲೇ ಬೀಡು ಬಿಟ್ಟಿದ್ದಾರೆ.

ಉತ್ತಮ ಆಹಾರವು ಸದೃಢ ಆರೋಗ್ಯದ ಬುನಾದಿ

ಆರ್.ರಾಜಗೋಪಾಲಶೆಟ್ಟಿ | ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ಪೌಷ್ಠಿಕ ಆಹಾರಗಳ ಮಕ್ಕಳ ಸಂತೆ

• ಪ್ರಜೋದಯ ವರದಿ

ಹಾಸನ: ನಗರದ ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ಮಕ್ಕಳಲ್ಲಿ ಲಾಭ- ನಷ್ಟ ಹಾಗೂ ವ್ಯವಹಾರ ಜ್ಞಾನದ ಅರಿವನ್ನು ಮೂಡಿಸುವ ಉದ್ದೇಶದಿಂದ ಮನೆಯಲ್ಲೇ ತಯಾರಿಸಿದ ಪೌಷ್ಠಿಕ ಆಹಾರಗಳ ಮಕ್ಕಳ ಸಂತೆ ಎಂಬ ವಿನೂತನ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಗಿತ್ತು.

ಸಂಸ್ಥೆಯ ಅಧ್ಯಕ್ಷ ಆರ್.ರಾಜಗೋಪಾಲಶೆಟ್ಟಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ತರಗತಿ ಕಲಿಕೆಗೆ ಪೂರಕವಾದ ಹಾಗೂ ಮುಂದಿನ ಭವಿಷ್ಯದ ನಿತ್ಯ ಜೀವನದಲ್ಲಿ ವ್ಯವಹರಿಸಲು ಬೇಕಾದ ವ್ಯವಹಾರ ಪ್ರಜ್ಞೆ, ಲಾಭ ಮತ್ತು ನಷ್ಟಗಳ ಲೆಕ್ಕಾಚಾರ ಹಾಗೂ ಸಾಮಾಜಿಕ ಅರಿವುಗಳ ಪರಿಕಲ್ಪನೆಯನ್ನು ಇಂತಹ ಕಾರ್ಯಕ್ರಮಗಳು ಸುಲಭವಾಗಿ ಅರ್ಥೈಸುತ್ತವೆ. ಆಹಾರ ಮತ್ತು ಆರೋಗ್ಯ ಒಂದು ನಾಣ್ಯದ ಎರಡು ಮುಖಗಳಂತಿದ್ದು, ಉತ್ತಮ ಆಹಾರವು ಸದೃಢ ಆರೋಗ್ಯದ ಬುನಾದಿಯಾಗಿದೆ ಎಂದು ಹೇಳಿದರು.

ಔಷಧವೇ ಆಹಾರವಾಗುತ್ತಿರುವ ಇಂದಿನ ಯುಗದಲ್ಲಿ ಪೌಷ್ಠಿಕ ಆಹಾರಗಳ ಅರಿವು ಅತ್ಯಗತ್ಯವಾಗಿದೆ. ಹಿಂದಿನ ಕಾಲದ ಹಳ್ಳಿಯ ಆಹಾರಗಳು ವಿವಿಧ ಪೋಷಕಾಂಶಗಳ ಆಗರವಾಗಿರುತ್ತಿದ್ದವು. ಕಲಬೆರಕೆ ಪದಾರ್ಥಗಳು ಹಾಗೂ ರಾಸಾಯನಿಕಗಳಿಂದ ಮುಕ್ತವಾಗಿರುತ್ತಿದ್ದವು. ಆದರೆ ಇಂದಿನ ಸಂಶ್ಲೇಷಿತ, ಕೃತಕ, ಕಲಬೆರಕೆ ಮತ್ತು ರಾಸಾಯನಿಕ ಯುಕ್ತ ಆಹಾರಗಳು ಮನುಷ್ಯನ ಆಯುಷ್ಯವನ್ನೇ ಕಸಿಯುತ್ತಿರುವುದು ಕಳವಳಕಾರಿಯಾಗಿದ್ದು, ಪ್ರತಿ ಮಕ್ಕಳ ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಆಹಾರದ ಗುಣಮಟ್ಟ ಮತ್ತು ಸುರಕ್ಷತೆಯ ಬಗ್ಗೆ ಅವಲೋಕಿಸುವ ಸುಸಂದರ್ಭ ಇದಾಗಿದೆ ಎಂದು ಸಲಹೆ ನೀಡಿದರು.

ಉತ್ತಮ ಶಿಕ್ಷಣ ಮತ್ತು ಆರೋಗ್ಯ ಗಳೆರಡನ್ನು ಮಕ್ಕಳಿಗೆ ನೀಡುವ ಗುರುತರ ಜವಬ್ದಾರಿ ನಮ್ಮೆಲ್ಲರ ಮೇಲಿದ್ದು ಅದನ್ನು ಸಾಕಾರಗೊಳಿಸಿದರೆ ಮುಂದಿನ ಸಮಾಜಕ್ಕೆ ದೈಹಿಕ ಮತ್ತು ಮಾನಸಿಕವಾಗಿ ಉತ್ತಮ ಆರೋಗ್ಯವಂತ ಸತ್ಪ್ರಜೆಗಳನ್ನು ಸಮಾಜಕ್ಕೆ ನೀಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಆಹಾರ ಮೇಳ ಆಯೋಜಿಸಿರುವುದು ಅತ್ಯಂತ ಸಮಯೋಚಿತವಾಗಿದೆ ಎಂದು ಅಭಿಪ್ರಾಯಪಟ್ಟರು.

3 ರಿಂದ 8ನೇ ತರಗತಿಯಿಂದ ಸುಮಾರು 580 ವಿದ್ಯಾರ್ಥಿಗಳು ಆಹಾರ ಮೇಳದಲ್ಲಿ ಭಾಗವಹಿಸಿ ಬಾಯಿ ನೀರೂರಿಸುವ ವಿವಿಧ ಬಗೆಯ ಆಹಾರ ಪದಾರ್ಥಗಳಾದ ಜಾಮೂನು, ಕೋಸಂಬರಿ, ಕ್ಯಾರೆಟ್ ಹಲ್ವ, ಲೆಮನ್ ಜ್ಯೂಸ್, ಚಿರೋಟಿ, ಬಾದಾಮ್ ಪೂರಿ, ರಸಗುಲ್ಲ, ಮಸಾಲ ಮಜ್ಜಿಗೆ, ಮೋದಕ, ಶಂಕರಪೋಳಿ, ಚೂಡ, ಗಿಣ್ಣು, ಪಾನಕ, ಹೆರಳಿಕಾಯಿ ಜ್ಯೂಸ್, ಹೋಳಿಗೆ, ನಿಪ್ಪಟ್ಟು, ವಾಟರ್‌ಮೆಲನ್ ಸಲಾಡ್, ಸಮೋಸ, ಮಶ್ರೂಮ್ ರೈಸ್, ಲೆಮನ್ ರೈಸ್, ಚಕ್ಕುಲಿ, ಕೋಡುಬಳೆ, ಮಸಾಲೆ ಪಪ್ಪಟ್, ತಂಬಿಟ್ಟು, ಕಡಲೆಕಾಳು ಉಸ್ಲಿ, ರಾಗಿ ಹಪ್ಪಳ, ಹಲಸಿನಕಾಯಿ ಕಬಾಬ್, ಡ್ರೈ ಫ್ರೂಟ್ಸ್ ಸಲಾಡ್, ರವೆ ಉಂಡೆ, ಬನಾನ ಜ್ಯೂಸ್, ಅವಲಕ್ಕಿ ಮಸಾಲ, ಎಳ ನೀರು, ಖಾರ ರೊಟ್ಟಿ, ಪನೀರ್ ರೋಲ್, ಮೊಳಕೆ ಕಾಳು, ಫ್ರೂಟ್ ಕಸ್ಟಡ್, ಕಚೋರಿ, ಮೆಣಸಿನಕಾಯಿ ಬಜ್ಜಿ, ರಾಗಿಹಾಲುಬಾಯಿ, ಸೌತೆಕಾಯಿ ಚಾಟ್, ಸ್ವೀಟ್ ಕಾರ್ನ್, ರಾಗಿ ರೊಟ್ಟಿ, ಕೋವಾ ಪೂರಿ, ರಾಗಿ ಶ್ಯಾವಿಗೆ, ವೆಜ್ ಪಲಾವ್, ಜೋಳದ ರೊಟ್ಟಿ, ಘಟ್ಟದ ರೊಟ್ಟಿ, ವಡಾಪಾವ್, ಅವರೆ ಕಾಳು ರೊಟ್ಟಿ, ಪನೀರ್ ಸ್ಯಾಂಡ್‌ವೆಜ್, ರಸಗುಲ್ಲ, ವಡಾ, ಕಟ್ಲೆಟ್, ಹುಣಸೆ ಮಸಾಲ, ಗೊಜ್ಜವಲಕ್ಕಿ, ಶ್ಯಾವಿಗೆ ಮುಂತಾದ ಬಗೆ ಬಗೆಯ ಖಾದ್ಯಗಳನ್ನು ಪ್ರದರ್ಶಿಸಿ ಮಾರಾಟ ಮಾಡಿದರು.

ನೆರೆದಿದ್ದ ಪೋಷಕರು, ಶಿಕ್ಷಕರು ಹಾಗೂ ಸಾರ್ವಜನಿಕರು ತಮಗಿಷ್ಟವಾದ ವೈವಿಧ್ಯಮಯ ಆಹಾರ ಪದಾರ್ಥಗಳನ್ನು ಕೊಂಡು ಸವಿದು ಸಂಭ್ರಮಿಸಿದರು. ಇಡೀ ಶಾಲೆಯು ಹಬ್ಬದ ವಾತಾವರಣದಂತೆ ಕಂಗೊಳಿಸುತ್ತಿತ್ತು. ಮಕ್ಕಳ ಪ್ರಯತ್ನವನ್ನು, ನೆರೆದಿದ್ದ ಪೋಷಕರು, ಶಿಕ್ಷಕರು ಹಾಗೂ ಸಾರ್ವಜನಿಕರು ಪ್ರಶಂಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಶಾಲೆಯ ಕಾರ್ಯದರ್ಶಿ ನಟರಾಜ್. ಎಂ., ಸಂಸ್ಥೆಯ ಟ್ರಸ್ಟಿ ಆಶಾ ನಟರಾಜ್, ಶಿಕ್ಷಕ ವೃಂದದವರು, ಪೋಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಪುಲ್ವಾಮಾ ಯೋಧರ ಬಲಿದಾನ: ಶ್ರದ್ಧಾಂಜಲಿ

• ಪ್ರಜೋದಯ ವರದಿ

ಸಕಲೇಶಪುರ: 2019ರ ಫೆಬ್ರವರಿ 14 ರಂದು ಜಮ್ಮು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಲೆಥ್ಪೊರದಲ್ಲಿ ನಡೆದ ಆತ್ಮಾಹುತಿ ದಾಳಿಯಲ್ಲಿ ಹುತಾತ್ಮರಾದ ಯೋಧರ ಬಲಿದಾನವನ್ನು ಸ್ಮರಿಸಿ ಸಕಲೇಶಪುರದಲ್ಲಿ ಹಿಂದೂ ಹಿತರಕ್ಷಣಾ ವೇದಿಕೆಯ ವತಿಯಿಂದ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಶಾಸಕ ಸಿಮೆಂಟ್ ಮಂಜುನಾಥ್ ಅವರು ಹುತಾತ್ಮ ಯೋಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿ ಮಾತನಾಡಿ, ದೇಶಕ್ಕಾಗಿ ಸೇವೆ ಸಲ್ಲಿಸುತ್ತಿದ್ದ ಯೋಧರು ಭಯೋತ್ಪಾದಕರ ದಾಳಿಗೆ ಬಲಿಯಾದ ಈ ದಿನವನ್ನು ನಾವು ಸದಾ ಸ್ಮರಣೆಯಲ್ಲಿ ಇಟ್ಟುಕೊಳ್ಳಬೇಕು. ಯುವಕರು ಪಾಶ್ಚಾತ್ಯ ಸಂಸ್ಕೃತಿಯ ಆಕರ್ಷಣೆಯಿಂದ ದೂರವಿದ್ದು ದೇಶಭಕ್ತಿ ಹಾಗೂ ಸಮರ್ಪಣಾ ಭಾವವನ್ನು

ಬೆಳೆಸಿಕೊಂಡರೆ ಭಾರತ ಇನ್ನಷ್ಟು ಬಲಿಷ್ಠವಾಗುತ್ತದೆ ಎಂದು ಹೇಳಿದರು.

ಚಂದ್ರಶೇಖರ್ ಅವರು ಮಾತನಾಡಿ, ರಾಷ್ಟ್ರ ಜಾಗೃತಿಯ ಕಾರ್ಯಗಳಲ್ಲಿ ಯುವಕರು ಹೆಚ್ಚಿನ ಆಸಕ್ತಿ ತೋರಬೇಕು. ಯುವಪೀಳಿಗೆ ಜಾಗೃತಿಯಾದರೆ ದೇಶದಲ್ಲಿ ಮಹತ್ತರ ಬದಲಾವಣೆ ಸಾಧ್ಯ. ಇಂತಹ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬೆಂಬಲ ನೀಡಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಶಾಂತರಾಜ್, ಹಿಂದೂ ಹಿತರಕ್ಷಣಾ ವೇದಿಕೆಯ ಮಂಜುನಾಥ್ ಕಬ್ಬಿನಗದ್ದೆ, ದುಷ್ಯಂತ್ ಗೌಡ, ಕೌಶಿಕ್, ಶಿವು ಜಿಪ್ಪಿ ಹಾಗೂ ರಘು ಜೀ ಯುವ ಬ್ರಿಗೇಡ್‌ನ ಸಂಯೋಜಕ ಜತಿನ್‌ಕುಮಾರ್, ಹರ್ಷ, ಹಲವರು ಭಾಗವಹಿಸಿದ್ದರು.

(ಶನಿವಾರದ ಕಾಫಿ ಧಾರಣೆ: 50 ಕೆ.ಜಿ.ಗೆ)

ಅರೆಬಿಕಾ ಪಾರ್ಚ್‌ಮೆಂಟ್- 23,500
ಅರೆಬಿಕಾ ಚೆರಿ-12,000
ರೊಬಸ್ಟಾ ಪಾರ್ಚ್‌ಮೆಂಟ್-18,100
ರೊಬಸ್ಟಾ ಚೆರಿ - 9,500

ಸಮಾಜವಾದಿಗಳ ಎಡಬಿಡಂಗಿ ನಡೆ ನಾಚಿಕೆಗೇಡಿನ ಸಂಗತಿ

• ಪ್ರಜೋದಯ ವರದಿ

ಅರಕಲಗೂಡು: ರೈತ ಸಂಘಟನೆ ರೈತನ ಆತ್ಮಗೌರವದ ಸಂಕೇತ. ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರ ವಿಚಾರಧಾರೆಗಳು ಇಂದಿನ ಯುವ ಪೀಳಿಗೆಗೆ ದಾರಿ ದೀಪವಾಗಬೇಕು ಎಂದು ರೈತ ಸಂಘದ ಹಿರಿಯ ಹೋರಾಟಗಾರ ಎಸ್.ಎನ್.ಮಂಜುನಾಥದತ್ತ ಅವರು ತಿಳಿಸಿದರು.

ರೈತ ಸಂಘ ಹಾಗೂ ಹಸಿರು ಸೇನೆ ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ಹಮ್ಮಿಕೊಂಡಿದ್ದ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ 90 ನೇ ಜನ್ಮ ದಿನಾಚರಣೆ ಹಾಗೂ ತಾಲ್ಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ. ರಾಮನೋಹರ್ ಲೋಹಿಯಾರವರ ನೇರ ಶಿಷ್ಯರಾಗಿದ್ದ ನಂಜುಂಡಸ್ವಾಮಿ ರಾಜ್ಯದಲ್ಲಿ ಸಮಾಜವಾದಿ ಸಿದ್ಧಾಂತಕ್ಕೆ ರೈತ ಚಳವಳಿಯ ಮೂಲಕ ಹೊಸ ಆಯಾಮ ನೀಡಿದರು. 50 ವರ್ಷಗಳ ಹಿಂದೆಯೇ ಶಿವಮೊಗ್ಗದಲ್ಲಿ ಕಬ್ಬು ಬೆಳೆಗಾರರ ಹೋರಾಟದ ಮೂಲಕ ರೈತ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಿದ್ದರು. ಅಂದು ಜಿಲ್ಲಾಧಿಕಾರಿಗಳ ಮನೆಯನ್ನೇ ಜಪ್ತಿ ಮಾಡಲು

ಮುಂದಾದ ಅವರ ಧೈರ್ಯ ಇಂದಿನ ಹೋರಾಟಗಾರರಿಗೆ ಸ್ಫೂರ್ತಿಯಾಗಬೇಕು ಎಂದರು.

ನಂಜುಂಡಸ್ವಾಮಿ ರಾಜಕೀಯ ಪಕ್ಷಗಳನ್ನು ಕುಷ್ಠರೋಗದ ಸಂಸ್ಥೆಗಳು ಎಂದು ಕರೆಯುತ್ತಿದ್ದರು. ಅಧಿಕಾರಕ್ಕಾಗಿ ಸಿದ್ಧಾಂತಗಳನ್ನು ಬಲಿ ಕೊಟ್ಟು, ಯಾವ ಪಕ್ಷ ಅಧಿಕಾರದಲ್ಲಿದೆಯೋ ಅದರ ಹಿಂದೆ ಹೋಗುವ ಇಂದಿನ ಸಮಾಜವಾದಿಗಳ ಎಡಬಿಡಂಗಿ ನಡೆ ನಾಚಿಕೆಗೇಡಿನ ಸಂಗತಿ, ಸಂಘಟನೆಯು ಎಂದಿಗೂ ತನ್ನ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಬೇಕು. ಶಿಸ್ತು ಮತ್ತು ಪ್ರಾಮಾಣಿಕತೆಯೇ ಸಂಘಟನೆ ಜೀವಾಳ. ತಾಲ್ಲೂಕಿನಲ್ಲಿ ಯುವಕರು, ಹಿರಿಯರು, ಮಹಿಳೆಯರು ಸೇರಿದಂತೆ ಬಡವರು ಮತ್ತು ದಲಿತರ ಮನೆ ಬಾಗಿಲಿಗೆ ಹೋಗಿ ಎಲ್ಲರನ್ನೂ ಒಗ್ಗೂಡಿಸುವತ್ತ ಗಮನ ಹರಿಸಿ, ಸಂಘಟನೆಗೆ ಹೊಸ ರಕ್ತ ಮತ್ತು ಆಧುನಿಕ ಆಲೋಚನೆಗಳನ್ನು ತರಲು ವಿದ್ಯಾವಂತ ಯುವಕರನ್ನು ಮುನ್ನೆಲೆಗೆ ತರುವುದು ಅಗತ್ಯ ಎಂದರು.

ಸಾನಿಧ್ಯ ವಹಿಸಿದ್ದ ದೊಡ್ಡಮಠದ ಮಠಾಧೀಶ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿದರು.

ಜಿಲ್ಲಾ ಘಟಕದ ಅಧ್ಯಕ್ಷ ಕಣಗಾಲ್ ಮೂರ್ತಿ, ತಹಶೀಲ್ದಾರ್ ಕೆ.ಸಿ. ಸೌಮ್ಯ, ಬೇಲೂರು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಭೋಗಮಲ್ಲೇಶ್, ತಾಲ್ಲೂಕು ಸಂಘದ ಅಧ್ಯಕ್ಷ ಭುವನೇಶ್, ಹೊಂಬೇಗೌಡ, ಎಚ್.ಇ. ಜಗದೀಶ್, ಪ್ರಕಾಶ್, ಬಾಲಣ್ಣ, ಬಸವರಾಜ್, ಚಲವರಾಜೇ ಅರಸ್, ಸರೋಜಮ್ಮ, ಪುರುಷೋತ್ತಮಗೌಡ, ಅತ್ನಿ ಹರೀಶ್ ಉಪಸ್ಥಿತರಿದ್ದರು.

ಸರ್ಕಾರಿ ಪ್ರಧಾನ ಪ್ರೌಢಶಾಲೆಯ ಸೇವಾದಳ ವಿದ್ಯಾರ್ಥಿಗಳಿಗೆ ಪದಕ ವಿತರಣೆ

ವಿದ್ಯಾರ್ಥಿಗಳು ಶಿಸ್ತುಬದ್ಧ ಜೀವನ ರೂಪಿಸಿಕೊಳ್ಳಿ

• ಪ್ರಜೋದಯ ವರದಿ

ಹಾಸನ: ವಿದ್ಯಾರ್ಥಿ ಜೀವನ ಚಿನ್ನದಂತಹ ಜೀವನವಾಗಬೇಕಾದರೆ ವಿದ್ಯಾರ್ಥಿಗಳು ಸರ್ವತೋಮುಖ ಬೆಳವಣಿಗೆಗೆ ಆದ್ಯತೆ ನೀಡಬೇಕು. ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳೆರಡರಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ಯಶಸ್ಸು ಗಳಿಸಬೇಕು ಎಂದು ಉಪ ಪ್ರಾಂಶುಪಾಲ ಮಂಜುನಾಥ್ ಅವರು ಹೇಳಿದರು.

ನಗರದ ಆರ್.ಸಿ. ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರಧಾನ) ಪ್ರೌಢಶಾಲಾ ಇಲ್ಲಿ ಆಯೋಜಿಸಿದ್ದ ಬೆಳಗಿನ ಪ್ರಾರ್ಥನಾ ಅವಧಿಯ ಸಚೇತನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 77ನೇ ಗಣರಾಜ್ಯೋತ್ಸವದಲ್ಲಿ ಪ್ರಧಾನ ಶಾಲೆಯ ವಿದ್ಯಾರ್ಥಿನಿಯರು ಸೇವಾದಳ ಘಟಕದಿಂದ ಪಥಸಂಚಲನದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದು

ಶಾಲೆಗೆ ಕೀರ್ತಿ ತಂದಿರುತ್ತಾರೆ. ಇದಕ್ಕಾಗಿ ಶ್ರಮಿಸಿದ ಮಾರ್ಗದರ್ಶಕರಾದ ರಾಜೇಂದ್ರರವರಿಗೆ, ಸೇವಾದಳದ ವಲಯ ಸಂಘಟಕರಾದ ರಾಣಿ. ವಿ. ಎಸ್. ರವರಿಗೆ ಶಾಲೆಯ ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಅಭಿನಂದನೆಗಳನ್ನು ತಿಳಿಸುತ್ತಾ ಸೇವಾದಳ ವಿದ್ಯಾರ್ಥಿನಿಯರಿಗೆ ಪದಕಗಳನ್ನು ವಿತರಿಸಿದರು.

ಶಾಲೆಯ ಸಹಶಿಕ್ಷಕ ಕೆ.ಎನ್. ಚಿದಾನಂದ ಅವರು ಮಾತನಾಡಿ, ಭಾರತ ಸೇವಾದಳದವು ದೇಶಪ್ರೇಮವನ್ನು ಬೆಳೆಸುವ ನಿಟ್ಟಿನಲ್ಲಿ ಸ್ಥಾಪನೆಯಾಗಿದ್ದು, ಸೇವೆಯನ್ನೇ ಶ್ರೇಷ್ಠ ಧರ್ಮವೆಂದು ಪರಿಗಣಿಸಿದೆ. ಸೇವಾದಳದ ಸ್ಥಾಪಕರಾದ ನಾ.ಸು. ಹರ್ಡೇಕರ್ ಅವರ ನೇತೃತ್ವದಲ್ಲಿ ನಡೆದ ಹಲವು ಚಟುವಟಿಕೆಗಳನ್ನು ಸ್ಮರಿಸಿದರು. ಶಿಸ್ತುಬದ್ಧ ಜೀವನಕ್ಕೆ ಸೇವಾದಳದಲ್ಲಿ ಭಾಗವಹಿಸುವುದು ಅಗತ್ಯವಾಗಿದೆ. ಇಪ್ಪತ್ತೊಂದನೇ ಶತಮಾನದಲ್ಲಿ ಸುಂದರ ಶಾಂತಿಯುತ ಬದುಕಿಗಾಗಿ, ಸಹಬಾಳ್ವೆ, ಸಾಂಘಿಕ ಬದುಕಿಗಾಗಿ ಸೇವಾದಳದ ಅಗತ್ಯವಿದೆ ಎಂದು ಹೇಳಿದರು.

ಹಾಸನ ಜಿಲ್ಲೆಯ ವಲಯ ಸಂಘಟಕರಾದ ರಾಣಿ ವಿ.ಎಸ್. ಅವರು ಮಾತನಾಡಿ, ಪ್ರಧಾನ ಶಾಲೆಯು ಹಿಂದಿನಿಂದ ಈಗಿನವರೆಗೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಉತ್ತಮ ಸಾಧನೆಗಳನ್ನು ಮಾಡುತ್ತ ಬಂದಿದೆ. ಉಪ ಪ್ರಾಂಶುಪಾಲರು ಮತ್ತು ಎಲ್ಲಾ ಶಿಕ್ಷಕರ ಸಹಕಾರ ಉತ್ತಮವಾಗಿರುವುದರಿಂದ ಈ ಬಾರಿ ಪಥ ಸಂಚಲನದಲ್ಲಿ ದ್ವಿತೀಯ ಸ್ಥಾನ ಪಡೆಯಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಪ್ರಥಮ ಸ್ಥಾನ ಪಡೆಯಲಿ ಎಂದು ಆಶಿಸಿದರು.

ಸೇವಾ ದಳದ ವಿದ್ಯಾರ್ಥಿಗಳಿಗೆ ಪಥಸಂಚಲನದ ಮಾರ್ಗದರ್ಶಕರಾದ ಪೊಲೀಸ್ ಅಧಿಕಾರಿ ರಾಜೇಂದ್ರ ಅವರು ವಿದ್ಯಾರ್ಥಿಗಳಿಗೆ ಪದಕಗಳನ್ನು ನೆನಪಿನ ಕಾಣಿಕೆಯಾಗಿ ನೀಡಿ ಮಾತನಾಡಿ, ಸೇವಾದಳ ಘಟಕದ ವಿದ್ಯಾರ್ಥಿ ನಾಯಕರಾದ ವರ್ಷ ಹಾಗೂ ಮಾನ್ವಿತ ಅವರ ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳಾದ ನಂಜಪ್ಪ, ಸಂತೋಷ್, ಶಿಕ್ಷಕರಾದ ಹೆಚ್.ಪಿ.ಮಂಜುಳ, ಎ.ವಿ.ಗೀತಾರಾಣಿ, ಎಂ.ಆರ್. ರಂಗಾಮಣಿ, ರುದ್ರೇಶ್, ಎಸ್. ಕೆ.ಪೂರ್ಣಿಮಾ, ಪಿ. ಮಧು, ತೈಬಾ ಕೌಸರ್, ಚಿದಾನಂದ, ಸಂಗೀತ ಶಿಕ್ಷಕರಾದ ಬಿ.ಎನ್.ಎಸ್.ಮುರಳಿ ಹಾಗೂ ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019